ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ

ಎಪ್ರಿಲ್ 2021
ಸಂಪುಟ 17, ಸಂಚಿಕೆ 03
ಸಂಚಿಕೆ ಬೆಲೆ ರೂ. 1/-

324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com







ಸಮಾಜ ಸೇವಾ ಸಮಿತಿಯ ವತಿಯಿಂದ ರಕ್ತದಾನ ಶಿಬಿರ–ನೆತ್ತರ ನೆರವು



ಮಹಿಳಾ ವಿಭಾಗದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ –ದೀಪ್ತಿ




Your Child's Journey...
To a Great Future Begins Here..!
Hostel fecilities available
G M VIDYANIKETAN PUBLIC SCHOOL
BRAHMAVAR
(Affiliated to the CBSE, Delhi)
AN ISO 9001:2015 CERTIFIED INSTITUTION
INTERNATIONAL SCHOOL AWARD
PRAKASHCHANDRA SHETTY
Chairman & Managing Trustee
TEL.: +91 820 2590399 | MOB : +91 9845317165 | E-mail : gmvps@rediffmail.com | web : www.gmvps.net

ADVT.

# ಸ್ನೇಹ ಚಿಂತನೆ

***Monthly Magazine Published by***

**BUNTS' SANGHA BANGALORE**

**VOL. 17     APRIL 2021     ISSUE 03**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

– ಸಂಪಾದಕ ಮಂಡಳಿ

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಸಮಾಜ ಸೇವಾ ಸಮಿತಿ ಮತ್ತು ಸೇವಾದಳ–ನೇತ್ರರ ನೆರವು | 5 |
| 5. | ಭುಂಗ್ರೂ – ರಾಷ್ಟ್ರಮಟ್ಟದ ವಿಚಾರ ಸಂಕಿರಣ | 6 |
| 6. | ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ | 8 |
| 7. | ಯುವ ವಿಭಾಗ ಮತ್ತು ವಿವಾಹ ವೇದಿಕೆ ಸಮಿತಿ ವರದಿ | 11 |
| 8. | ಹೀಗೊಂದು ಅಜ್ಜಿ ಕಥೆ | 12 |
| 9. | ತೆಂಕುತಿಟ್ಟಿನ ಪುಂಡುವೇಷದ ಮೇಧಾವಿ – ಡಾ। ಶ್ರೀಧರ ಭಂಡಾರಿ ಬಳ್ಳಂಬೆಟ್ಟು | 14 |
| 10. | ಆಧುನಿಕತೆಯ ನಂಟು ಅಪಾಯದ ಗಂಟು | 16 |
| 11. | ಅಪ್ರತಿಮ ಕ್ರೀಡಾಪಟು – ಬೊಮ್ಮರಬೆಟ್ಟು ಬಾಬು ಶೆಟ್ಟಿ | 18 |
| 12. | ಸಮಾಜ ಸೇವಾ ಸಮಿತಿ/ಸೇವಾದಳ – ಸಹಾಯ ಹಸ್ತ | 22 |
| 13. | Minutes of the AGM held on 06.02.2021 | 27 |

**ಮುಖಪುಟ**

**ಸಮಾಜ ಸೇವಾ ಸಮಿತಿ ವತಿಯಿಂದ**
**ಸ್ವಯಂಪ್ರೇರಿತ ರಕ್ತದಾನ ಶಿಬಿರ**
**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ**

# ಸಂಪಾದಕೀಯ



ಕೆಲವು ದಿನಗಳ ಹಿಂದೆ ನಮ್ಮ ಊರಲ್ಲಿ ಬೊಬ್ಬರ್ಯನ ಕೋಲ ನಡೆದಿತ್ತು. ಬ್ರಹ್ಮಾವರ ಸಮೀಪ ಇರುವ ನಮ್ಮ ಮನೆ, ಮೊದಲ್ತಾವು, ಹಲುವಳ್ಳಿ ಗ್ರಾಮ. ಈ ಬೊಬ್ಬರ್ಯನ ಕೋಲಕ್ಕೆ ಸ್ಥಳ ಮನೆಯವರು ನಾವು, ಮೊದಲ್ತಾವು ಮನೆಯವರು. ಆದರೂ ಇಡೀ ಗ್ರಾಮಸ್ಥರು ಸೇರಿ ಮಾಡುವ ಕೆಲಸ ಇದು. ನೂರಾರು ವರ್ಷಗಳಿಂದ ನಡೆಯುತ್ತಾ ಬಂದ ಈ ಕೋಲವು ಪ್ರತೀ ವರ್ಷ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ನಾನು ಚಿಕ್ಕಂದಿನಿಂದಲೂ ತಪ್ಪದೇ ಕೋಲದಲ್ಲಿ ಭಾಗಿಯಾಗುತ್ತಿದ್ದವನು. ದುರ್ಗಾಪರಮೇಶ್ವರಿ ಅಮ್ಮನವರ ಹಾಗೂ ಬೊಬ್ಬರ್ಯನ ಎರಡು ಸಣ್ಣ ದೇವಸ್ಥಾನಗಳು ಅಕ್ಕ ಪಕ್ಕದಲ್ಲಿ ಇವೆ. ರಾತ್ರಿ 8.30 ಗಂಟೆಯಿಂದ ಭಜನೆ ಕಾರ್ಯಕ್ರಮದಿಂದ ಪ್ರಾರಂಭವಾಗಿ, ಗಗ್ಗರ ಸೇವೆ, ಸಿರಿ ಸೇವೆ, ಅಮ್ಮನವರ ಹಾಗೂ ಬೊಬ್ಬರ್ಯನ ದರ್ಶನ, ಕೆಂಡಸೇವೆ, ಹೂ ಕಾಯಿ ಸೇವೆ, ದಳಿದೀಪ ಸೇವೆ, ಬೆಳಗಿನ ಜಾವದಲ್ಲಿ ಅಣಿಕಟ್ಟಿದ ಕೋಲ ಸೇವೆ, ನುಡಿ, ಪ್ರಸಾದ ಹೀಗೆ ಒಂದಾದ ಮೇಲೊಂದು ಸೇವೆ ನಡೆಯುತ್ತಾ ಬೆಳಗಿನ ಜಾವದವರೆಗೂ ಕಾರ್ಯಕ್ರಮ. ಇಲ್ಲಿ ಅಪರೂಪದ ಸೂಡಿ ಮತ್ತು ತೆಂಗಿನ ಕಾಯಿ ಕಾಳಗ, ವಾದ್ಯ, ಚಂಡೆ, ಡೋಲು ಸದ್ದು ಇನ್ನೂ ಹೆಚ್ಚಿನ ಮೆರುಗನ್ನು ನೀಡುತ್ತದೆ. ಬೆಳಗ್ಗಿನ ನೀಚನ ಕೋಲದೊಂದಿಗೆ ಕಾರ್ಯಕ್ರಮ ಮುಕ್ತಾಯ. ಹೀಗೆ ಇಡೀ ಗ್ರಾಮದ, ಹೊರ ಊರಿನಿಂದ ಬಂದ ಜನರೆಲ್ಲರೂ ಸೇರಿ ಅತ್ಯಂತ ವಿಜೃಂಭಣೆ, ಶ್ರದ್ಧಾ ಭಕ್ತಿಯಿಂದ ಈ ಕಾರ್ಯಕ್ರಮ ನಡೆಯುತ್ತದೆ. ನೀವು ಇದನ್ನು ಓದುತ್ತಾ ಈ ವಿಷಯ ಇಲ್ಲಿ ಏಕೆ ಬಂತು ಎಂದು ಪ್ರಶ್ನಿಸಬಹುದು. ಆದರೆ ನನ್ನ ಈ ಲೇಖನದ ಉದ್ದೇಶವೇ ಬೇರೆ. ಕೋಲ ಹಲವು ಕಡೆ ಇಂದಿನ ದಿನಗಳಲ್ಲಿ ಜರಗುತ್ತವೆ. ಆದರೆ, ನಮಗೆ ಪ್ರತೀ ವರ್ಷ ಒಂದು ಪ್ರಶ್ನೆ ಮೂಡುತ್ತಾ ಇರುತ್ತಿತ್ತು – ಮುಂದೆ ಇದು ನಡೆಯುತ್ತದಾ? ಯಾರು ಮುಂದುವರಿಸುತ್ತಾರೆ? ಬಹಳ ಹಿಂದೆ ನಮ್ಮ ಮನೆಯ ಕಾರ್ಯಕ್ರಮವಾಗಿದ್ದ ಇದು, ನಂತರ ಊರಿನ ಎಲ್ಲರ ಕಾರ್ಯಕ್ರಮವಾಗಿ ಪರಿವರ್ತನೆಗೊಂಡಿತು. ಭೂ ಸುಧಾರಣಾ ಕಾಯ್ದೆಯ ನಂತರ ಅನೇಕ ಬದಲಾವಣೆಗಳಾದವು. ಆದರೂ ತುಂಬಾ ಸಂತೋಷದ ವಿಷಯವೆಂದರೆ ವರ್ಷದಿಂದ ವರ್ಷಕ್ಕೆ ಇದು ಹೆಚ್ಚಿನ ವಿಜೃಂಭಣೆಯಿಂದ ನಡೆಯುತ್ತಲೇ ಇದೆ.

ಭಕ್ತಾಧಿಗಳ ಸೇವೆ ಹೆಚ್ಚುತ್ತಲೇ ಇವೆ. ಇದೇ ಸಂತೋಷದ ವಿಷಯ ಅಲ್ಲವೇ? ಬದಲಾವಣೆ, ಜಾಗತೀಕರಣ, ಆಧುನೀಕರಣ ಇವೆಲ್ಲದರ ನಡುವೆ ದೇವರ, ಸಾಂಸ್ಕೃತಿಕ, ಭಕ್ತಿ ಪ್ರಧಾನವಾದ ಕೆಲಸಗಳು ನಡೆಯುವುದು ಎಂದರೆ ಆಶ್ಚರ್ಯವಲ್ಲವೇ? ಇವತ್ತಿನ ದಿನಗಳಲ್ಲಿ ನಂಬಿಕೆ ಎನ್ನುವುದು ಬಹಳ ಮುಖ್ಯವಾದ ವಿಷಯ. ನಾನು ವೈಯಕ್ತಿಕವಾಗಿ ಬಹಳ ವರ್ಷಗಳಿಂದ ಅತ್ಯಂತ ಉತ್ಸುಕನಾಗಿ, ದರ್ಶನ ಪಾತ್ರಿಗಳ ಮತ್ತು ಅಣಿಕಟ್ಟಿದ ದೇವರ ನುಡಿಗಳನ್ನು ಕೇಳುತ್ತಾ ಬಂದವನು. ಇಂದಿಗೂ ಬಹಳ ಆಶ್ಚರ್ಯದ ವಿಚಾರ ಏನೆಂದರೆ ಅವರ ಬಾಯಿಂದ ಅತ್ಯಂತ ಸೂಕ್ಷ್ಮ ವಿಷಯಗಳು ಬರುತ್ತಿದ್ದವು. ಏನೇ ಸ್ವಲ್ಪ ಹೆಚ್ಚು ಕಡಿಮೆಯಾದರೆ, ಏನಾದರೂ ಹೊಸ ಸೂಚನೆ, ಬದಲಾವಣೆ ಇದ್ದರೆ ಅದು ತಪ್ಪದೇ ನುಡಿಯಲ್ಲಿ ಬರುತ್ತವೆ. ಇದನ್ನು ಪವಾಡ ಎನ್ನಲೇ, ನಿಜ ಅಥವಾ ಕಾಕತಾಳೀಯ ಎನ್ನಲೇ ಅನ್ನುವುದೇ ಕೆಲವರಿಗೆ ಗೊತ್ತಾಗಲಾರದು.

ಆದರೆ ಒಂದಂತೂ ಸತ್ಯ. ಇಂತಹ ದೈವ ಕೆಲಸಗಳು ನಡೆಯುತ್ತಾ ಇರಬೇಕು, ನಮ್ಮ ಸಮಾಜ ಬಾಂಧವರು, ಯುವ ಪೀಳಿಗೆಯ ಎಲ್ಲರೂ ಇಂತಹ ಕೆಲಸಗಳಲ್ಲಿ ಭಾಗಿಯಾಗಿ ನಮ್ಮ ಸಂಸ್ಕೃತಿ, ನಂಬಿಕೆ, ಆಚಾರ ವಿಚಾರಗಳ ಬಗ್ಗೆ ತಿಳಿದುಕೊಳ್ಳಬೇಕು. ಎಲ್ಲಾ ಜನರು ಒಟ್ಟಿಗೆ ಸೇರಿ ಸಂಭ್ರಮಿಸುವಂತಹ ಅವಕಾಶಗಳು ಹೆಚ್ಚಾಗಬೇಕು. ನಮ್ಮ ಸಂಸ್ಕೃತಿ ಉಳಿಯಬೇಕು, ಮುಂದುವರಿಯಬೇಕು.

ಇದರ ನಡುವೆ ಕೋವಿಡ್ ಸಮಸ್ಯೆ ಇನ್ನೂ ಬಗೆ ಹರಿದಿಲ್ಲ. ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಾವೆಲ್ಲರೂ ಇದನ್ನು ಅರ್ಥಮಾಡಿಕೊಂಡು ಕೋವಿಡ್‌ನ ನಿಯಮಗಳನ್ನು ತಪ್ಪದೇ ಪಾಲಿಸಿ, ಸಂತೋಷದಿಂದ, ಆರೋಗ್ಯವಂತರಾಗಿರೋಣ ಅಲ್ಲವೇ?.

**ಎಂ. ಮುರಲೀಧರ ಹೆಗ್ಡೆ**
hegdemm@gmail.com

# ಅಧ್ಯಕ್ಷರ ಮಾತು



ಮಾನ್ಯ ಸದಸ್ಯ ಬಾಂಧವರೇ,

ತಮಗೆಲ್ಲರಿಗೂ ಸೌರಮಾನ ಯುಗಾದಿಯ ಹಾರ್ದಿಕ ಶುಭಾಶಯಗಳು,

ಕೋವಿಡ್‌ನಿಂದ ಮಂದಗತಿಯಲ್ಲಿ ಸಾಗುತ್ತಿದ್ದ ಆರ್ಥಿಕ ಚಟುವಟಿಕೆಗಳು ಹಂತ-ಹಂತವಾಗಿ ಪುನಶ್ಚೇತನಗೊಂಡು, ನಾವೆಲ್ಲರೂ ನಿಟ್ಟುಸಿರು ಬಿಡುವಂತಾಗಿತ್ತು. ಆದರೆ, ಹಠಾತ್ತಾಗಿ ಕೋವಿಡ್ ಎರಡನೇ ಅಲೆಯಿಂದಾಗಿ ಸೋಂಕು ಉಲ್ಬಣಗೊಂಡು ಈಗ ಮತ್ತೊಮ್ಮೆ ಜನಜೀವನ ಅಸ್ತವ್ಯಸ್ತಗೊಳ್ಳುತ್ತಿದೆ. ಈ ಆರ್ಥಿಕ ಬಿಕ್ಕಟ್ಟಿನ ಸವಾಲನ್ನು ಮತ್ತೊಮ್ಮೆ ಸಮರ್ಥವಾಗಿ ಎದುರಿಸಲು ನಾವೆಲ್ಲರೂ ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕಾಗಿದೆ.

ಕೋವಿಡ್ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸರಾಸರಿ ಒಂದು ವರ್ಷದಿಂದೀಚೆಗೆ ಸಂಘದ ಕಾರ್ಯಚಟುವಟಿಕೆಗಳು ಕೊಂಚ ಕಡಿಮೆಯಾಗಿದ್ದರೂ, ಚಾರಿಟಿ ಕಾರ್ಯಕ್ರಮಗಳನ್ನು ಆದಷ್ಟು ಮಟ್ಟಿಗೆ ಮುಂದುವರಿಸಿ ಸದಸ್ಯರ ಸಂಕಷ್ಟಗಳಿಗೆ ಸ್ಪಂದಿಸುವ ಪ್ರಯತ್ನವನ್ನು ನಾವು ಮಾಡಿರುತ್ತೇವೆ.

ಕಳೆದ ವರ್ಷ ಕೋವಿಡ್‌ನಿಂದಾಗಿ ಕೊನೆಯ ಕ್ಷಣದಲ್ಲಿ ರದ್ದುಗೊಂಡ ಮಹಿಳಾ ದಿನಾಚರಣೆಯನ್ನು ಈ ಬಾರಿ ಮತ್ತೊಮ್ಮೆ ಸರಳವಾಗಿ ಆಯೋಜಿಸಿದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ ಮತ್ತು ತಂಡಕ್ಕೆ ಹಾಗೂ ಕೋವಿಡ್ ಪರಿಸ್ಥಿತಿಯಲ್ಲಿ ಸಮಯೋಚಿತವಾಗಿ ರಕ್ತದಾನ ಶಿಬಿರವನ್ನು ಆಯೋಜಿಸಿದ ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ಚೇರ್‌ಮೆನ್ ಶ್ರೀ ಎಂ.ಬಿ.ಉಮೇಶ್ ಶೆಟ್ಟಿ ಮತ್ತು ತಂಡಕ್ಕೆ ತುಂಬು ಹೃದಯದ ಅಭಿನಂದನೆಗಳು.

ತಮಗೆ ತಿಳಿದಿರುವಂತೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಯೋಜನೆ ಅಂತಿಮ ಹಂತದಲ್ಲಿದೆ. 2021-22 ನೇ ಶೈಕ್ಷಣಿಕ ವರ್ಷದಿಂದ ತರಗತಿಗಳನ್ನು ಪ್ರಾರಂಭಿಸಲು ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಸಿ ಶಾಲೆ ನಡೆಸುವ ಬೃಹತ್ ಜವಾಬ್ದಾರಿ ನಮ್ಮ ಮುಂದಿದೆ. ಇವೆಲ್ಲವನ್ನೂ ಸಮರ್ಥವಾಗಿ ನಿಭಾಯಿಸಲು ತಮ್ಮೆಲ್ಲರ ಸಹಕಾರ ಅತೀ ಮುಖ್ಯ. 2021 ರ ಮೇ 21 ಮತ್ತು 22 ರಂದು ತಮ್ಮೆಲ್ಲರ ಸಮ್ಮುಖದಲ್ಲಿ ಶಾಲೆಯ ಉದ್ಘಾಟನಾ ಸಮಾರಂಭವನ್ನು ನೆರವೇರಿಸಬೇಕೆಂದು ನಮ್ಮ ಸಮಿತಿಯು ತೀರ್ಮಾನಿಸಿದ್ದರೂ, ಕೋವಿಡ್ ಕಾರಣದಿಂದ ಕಾರ್ಯಕ್ರಮವನ್ನು ಮುಂದೂಡುವ ಸಾಧ್ಯತೆ ಇದೆ.

ಎಲ್ಲಾ ಶಿಕ್ಷಣ ಸಂಸ್ಥೆಗಳು ಶಾಲಾ ಶುಲ್ಕದಲ್ಲಿ 30% ವಿನಾಯಿತಿ ನೀಡಬೇಕೆಂಬ ಸರಕಾರದ ಆದೇಶದಿಂದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಶುಲ್ಕ ಸಂಗ್ರಹದಲ್ಲಿ ಹಿನ್ನಡೆಯಾಗಿ ಬಂಟರ ಸಂಘ ಆರ್.ಎನ್.ಎಸ್.

ವಿದ್ಯಾನಿಕೇತನ-II ಯೋಜನೆ ಅಗತ್ಯವಿರುವ ನಿಧಿಯ ಅಭಾವಕ್ಕೆ ಪ್ರಮುಖ ಕಾರಣವಾಗಿದೆ. ಆದ್ದರಿಂದ ತಾವೆಲ್ಲರೂ ಹೆಚ್ಚಿನ ದೇಣಿಗೆ ನೀಡುವುದರ ಮೂಲಕ ಯೋಜನೆ ಪೂರ್ಣಗೊಳ್ಳಲು ನಮ್ಮೊಂದಿಗೆ ಕೈಜೋಡಿಸಬೇಕಾಗಿ ಮತ್ತೊಮ್ಮೆ ವಿನಮ್ರತೆಯಿಂದ ಕೇಳಿಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

ಸದಸ್ಯ ಬಾಂಧವರು ಚೆಕ್/ ಬ್ಯಾಂಕ್ ಟ್ರಾನ್ಸ್‌ಫರ್ ಮೂಲಕ ತಮ್ಮ ದೇಣಿಗೆಯನ್ನು ನೀಡಬಹುದಾಗಿದ್ದು, ಪಾವತಿಯ ವಿವರಗಳನ್ನು ಮೊ.ಸಂಖ್ಯೆ : 7022119739 ಗೆ ಕಳುಹಿಸಬಹುದಾಗಿದೆ.

Bank A/c details:
**BUNTS SANGHA BANGALORE BUILDING FUND A/C**
S.B. A/C No. 89450100019122, IFSC CODE - BARB0VJVIJB
'BANK OF BARODA, VIJAYANAGAR BRANCH, BANGALORE,

ವಿ.ಸೂ: ದಾನಿಗಳು ತಮ್ಮ ಸ್ವಇಚ್ಛೆಯಿಂದ ಯಾವುದೇ ಮೊತ್ತದ ದೇಣಿಗೆ ನೀಡಿದರೂ, ಅದನ್ನು ಗೌರವಪೂರ್ವಕವಾಗಿ ಸ್ವೀಕರಿಸಲಾಗುವುದು.

# ಗೌರವ ಕಾರ್ಯದರ್ಶಿಗಳ ವರದಿ



ಗೌರವಾನ್ವಿತ ಸದಸ್ಯರೆಲ್ಲರಿಗೂ ಮುಂಬರುವ ಯುಗಾದಿ ಹಬ್ಬದ ಶುಭಾಶಯಗಳು.

ಕಳೆದೊಂದು ವರ್ಷದಿಂದ ಕೋವಿಡ್ ಕಾರಣದಿಂದಾಗಿ ಸಂಘದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲು ಸಾಧ್ಯವಾಗಲಿಲ್ಲ. ಇದರೊಂದಿಗೆ ಆರ್ಥಿಕ ಅಡಚಣೆಯಿಂದಾಗಿ ಕಾರ್ಯಕ್ರಮಗಳಿಗೆ ಸದಸ್ಯರುಗಳಿಂದ ದೇಣಿಗೆ ಸಂಗ್ರಹವೂ ಕಷ್ಟವಾಗುತ್ತಿದೆ.

ದಿನಾಂಕ 13.03.2021ರಂದು ಸಂಘದ ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶೇಷವಾಗಿ ಆಯೋಜಿಸಲಾಗಿತ್ತು. ಕಳೆದ ವರ್ಷ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಿದ್ದ ಇದೇ ಕಾರ್ಯಕ್ರಮ ಕೋವಿಡ್ ಲಾಕ್‌ಡೌನ್‌ನಿಂದಾಗಿ ಕೊನೆಕ್ಷಣದಲ್ಲಿ ರದ್ದಾಗಿತ್ತು. ಕಳೆದ ಬಾರಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸಿ ಎಲ್ಲಾ ತಯಾರಿಯ ಬಳಿಕ ಕಾರ್ಯಕ್ರಮ ರದ್ದಾಗಿದ್ದಕ್ಕೆ ನಿರಾಶೆಯಲ್ಲಿದ್ದ ತಂಡಗಳು ಈ ಬಾರಿ ಅದೇ ಉತ್ಸಾಹದಲ್ಲಿ ಭಾಗವಹಿಸಿದ್ದವು. ಕೋವಿಡ್ ಮುನ್ನೆಚ್ಚರಿಕೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸದಸ್ಯ ಬಾಂಧವರನ್ನು ಕಾರ್ಯಕ್ರಮಕ್ಕೆ ಆಮಂತ್ರಿಸಲಾಗಿರಲಿಲ್ಲ. ಪ್ರತಿಯೊಂದು ಸ್ಪರ್ಧೆಯು ಬಹಳ ಸ್ಪರ್ಧಾತ್ಮಕವಾಗಿದ್ದು, ಇಲ್ಲಿ ಯಾರು ಪ್ರಶಸ್ತಿಯನ್ನು ಪಡೆದರು ಯಾರಿಗೆ ಸಿಗಲಿಲ್ಲ ಅನ್ನುವುದಕ್ಕಿಂತ ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿ ಬಂದಿದೆ ಎನ್ನುವುದೇ ಮುಖ್ಯ. ಕಾರ್ತಿಕ್ ಬಿ. ಶೆಟ್ಟಿ ಮತ್ತು ಕೃತಿ ಬಿ. ಶೆಟ್ಟಿ ಇವರ ಪರಿಕಲ್ಪನೆ ಹಾಗೂ ನಿರ್ದೇಶನದಲ್ಲಿ ಮೂಡಿಬಂದ 'ಪಾಂಚಾಲಿ' ನೃತ್ಯ ರೂಪಕ ಬಹಳ ಅರ್ಥಪೂರ್ಣವಾಗಿ ಹಾಗೂ ವಿಭಿನ್ನವಾಗಿ ಮೂಡಿಬಂತು. ಈ ಕಾರ್ಯಕ್ರಮಕ್ಕೆ ಬಹಳಷ್ಟು ಪ್ರಯತ್ನಪಟ್ಟು ಒಂದು ವರ್ಷದಿಂದ ತಾಳ್ಮೆಯನ್ನು ಇಟ್ಟುಕೊಂಡು ಕಾರ್ಯಕ್ರಮವನ್ನು ಬಹಳಷ್ಟು ಚಂದವಾಗಿ ನಡೆಸಿಕೊಟ್ಟಂತಹ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕಿ ಶ್ರೀಮತಿ ಯೋಗ್ಯ ಎಲ್. ರೈ ಹಾಗೂ ಮಹಿಳಾ ವಿಭಾಗದ ಸದಸ್ಯೆಯರಿಗೆ ಪ್ರೀತಿಯ ವಂದನೆಗಳು.

ದಿನಾಂಕ 21.03.2021ರಂದು ಸಂಘದ ಆವರಣದಲ್ಲಿ ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ವತಿಯಿಂದ ನೆತ್ತರ ನೆರವು ಕಾರ್ಯಕ್ರಮವನ್ನು ಆಯೋಜಿಸಿ ಶಿಬಿರದಲ್ಲಿ ಬಹಳಷ್ಟು ಜನರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವುದರ ಮೂಲಕ ಒಂದಷ್ಟು ಜನರ ತುರ್ತು ಅಗತ್ಯತೆಗೆ ನೆರವಾದರು. ರಕ್ತದಾನದ ಮೂಲಕ ಇನ್ನೊಬ್ಬರಿಗೆ ಜೀವದಾನವನ್ನು ಮಾಡಿರುವ ಸರ್ವರಿಗೂ ಸಂಘದ ಪರವಾಗಿ ಧನ್ಯವಾದಗಳು. ಬಹಳಷ್ಟು ಶ್ರಮವಹಿಸಿ ಕಾರ್ಯಕ್ರಮ ಆಯೋಜಿಸಿರುವ ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ಚೇರ್‌ಪರ್ಸನ್‌ರಾದ ಶ್ರೀಎಂ.ಬಿ. ಉಮೇಶ್ ಶೆಟ್ಟಿಯವರಿಗೆ, ಸಮಾಜ ಸೇವಾ ಸಮಿತಿಯ ಸಂಚಾಲಕರಾದ ಶ್ರೀ ಉಳ್ತೂರು ಅಜಿತ್ ಶೆಟ್ಟಿ ಮತ್ತು ಸೇವಾದಳದ ಸಂಚಾಲಕರಾದ ಶ್ರೀ ಭಾಸ್ಕರ್ ಶೆಟ್ಟಿಯವರಿಗೆ ಅಭಿನಂದನೆಗಳು.

ದಿನಾಂಕ 07.03.2021ರಂದು ಯುವ ವಿಭಾಗ ಮತ್ತು ವಿವಾಹ ವೇದಿಕೆ ಸಮಿತಿ ವತಿಯಿಂದ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ-II ಇಲ್ಲಿಗೆ ಏರ್ಪಡಿಸಿದ್ದ ಪ್ರವೇಶ ಅಭಿಯಾನದಲ್ಲಿ ಸಂಘದ ಸದಸ್ಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಆಯೋಜಿಸಿದ್ದ ಯುವ ವಿಭಾಗದ ಚೇರ್‌ಪರ್ಸನ್‌ರಾದ ಡಾ. ವೈ ಉಮಾನಾಥ ಶೆಟ್ಟಿಯವರಿಗೆ ಹಾಗೂ ವಿವಾಹ ವೇದಿಕೆ ಸಮಿತಿಯ ಚೇರ್‌ಪರ್ಸನ್‌ರಾದ ಶ್ರೀಮತಿ ತಾರಾಮಣಿ ಹೆಗ್ಡೆಯವರಿಗೆ ವಂದನೆಗಳು.

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ-II ಇದರ ಕಾಮಗಾರಿಯು ಕೊನೆಯ ಹಂತದಲ್ಲಿದ್ದು, ಬರುವ ಶೈಕ್ಷಣಿಕ ವರ್ಷದಿಂದ ಹೆಚ್ಚಿನ ತರಗತಿಗಳನ್ನು ಆರಂಭಿಸುವ ಕೆಲಸ ಭರದಿಂದ ಸಾಗುತ್ತಿದೆ. ಹಾಗೆಯೇ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರು ಶಾಲೆಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲಿಸಲು ಶ್ರಮಿಸುತ್ತಿದ್ದಾರೆ. ಅವರಿಗೆ ಜೊತೆಯಾಗಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಹಾಗೂ ಉದ್ಯೋಗ ಮಾಹಿತಿ ಮತ್ತು ಮಾನವ ಸಂಪನ್ಮೂಲ ಸಮಿತಿಯ ಚೇರ್‌ಪರ್ಸನ್‌ರವರಾದ ಶ್ರೀಮತಿ ಸುರೇಖ ಶೆಟ್ಟಿಯವರ ಸಹಕಾರ ಅವಿಸ್ಮರಣೀಯ. ತಾವೆಲ್ಲರೂ ತಮ್ಮ ಅಥವಾ ತಮ್ಮ ಪರಿಚಯಸ್ಥರ ಮಕ್ಕಳನ್ನು ಶಾಲೆಗೆ ಸೇರಿಸುವ ಮುಖಾಂತರ ಶಾಲೆಯ ಮಕ್ಕಳ ನೋಂದಾವಣೆಗೆ ತಮ್ಮ ಕೊಡುಗೆ ಅವಶ್ಯಕ. ಈ ಶೈಕ್ಷಣಿಕ ಕಾಮಗಾರಿಗೆ ಧನಸಹಾಯ ನಿರೀಕ್ಷಿಸಿ ಹಲವಾರು ಸದಸ್ಯರನ್ನು ಸಂಪರ್ಕಿಸಿದ್ದು, ಕೆಲ ಸದಸ್ಯರು ದೇಣಿಗೆ ನೀಡಿದ್ದರೆ, ಇನ್ನೂ ಹಲವಾರು ಸಹೃದಯರು ಆಶ್ವಾಸನೆ ನೀಡಿರುತ್ತಾರೆ.

ಕೋವಿಡ್ ಎರಡನೇ ಅಲೆಯಿಂದಾಗಿ ಸಂಘದ ಸಭಾಭವನದಲ್ಲಿ ಕಾರ್ಯಕ್ರಮಗಳ ಬುಕ್ಕಿಂಗ್ ಸಹ ಕಡಿಮೆಯಾಗಿದೆ. ಕಾರ್ಯಕ್ರಮಗಳಿಗೆ ಹೆಚ್ಚಿಗೆ ಜನ ಸೇರುವಂತಿಲ್ಲ ಎಂಬ ನಿಯಮದಿಂದಾಗಿ, ಕಾರ್ಯಕ್ರಮಗಳು ರದ್ದಾಗುವ ಪ್ರಮೇಯವೂ ಹೆಚ್ಚಿದೆ. ಬಾಡಿಗೆಯಲ್ಲೂ ಗರಿಷ್ಠ ರಿಯಾಯಿತಿ ನೀಡಬೇಕಾಗುತ್ತದೆ. ಇವೆಲ್ಲವೂ ಸಂಘದ ಆರ್ಥಿಕ ಹಿನ್ನಡೆಗೆ ಕಾರಣವಾಗುತ್ತದೆ.

ಸಂಘವನ್ನು ಬಲಪಡಿಸಲು ತಮ್ಮೆಲ್ಲರ ಶ್ರಮ, ಸಹಾಯ, ಸಹಕಾರ ಹೀಗೆ ಮುಂದುವರಿಯಲಿ ಎನ್ನುವ ಆಶಯ ನಮ್ಮದು.

ವಂದನೆಗಳೊಂದಿಗೆ,

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಬಂಟರ ಸಂಘ ಬೆಂಗಳೂರು
# ಸಮಾಜ ಸೇವಾ ಸಮಿತಿ ಮತ್ತು ಸೇವಾದಳ–ನೆತ್ತರ ನೆರವು






ಬಂಟರ ಸಂಘದ ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ವತಿಯಿಂದ ಹಾಗೂ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ದಿನಾಂಕ 21.03.2021ರಂದು ಸಂಘದ ಸೆಮಿನಾರ್ ಹಾಲ್‌ನಲ್ಲಿ 'ನೆತ್ತರ ನೆರವು' ಸ್ವಯಂಪ್ರೇರಿತ ರಕ್ತದಾನ ಶಿಬಿರ ಕಾರ್ಯಕ್ರಮವು ನಡೆಯಿತು.

ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ಚೇರ್‌ಪರ್ಸನ್‌ರಾದ ಶ್ರೀ ಉಮೇಶ್ ಶೆಟ್ಟಿ ಎಂ.ಬಿ ಪ್ರಸ್ತಾವಿಕವಾಗಿ ಮಾತನಾಡಿ ಕೊರೋನಾ ಸಮಯದಲ್ಲೂ ರಕ್ತದಾನದಂತಹ ಮಹತ್ಕಾರ್ಯದಲ್ಲಿ ಭಾಗವಹಿಸಿ ರಕ್ತದಾನ ಮಾಡಿದ ಸರ್ವರನ್ನು ಅಭಿನಂದಿಸಿದರು. ಸಮಾಜ ಸೇವಾ ಸಮಿತಿ ಕಳೆದ ಎರಡು ವರ್ಷಗಳಿಂದ ಸಾಕಷ್ಟು ಸಾಮಾಜಿಕ ಕೆಲಸಗಳನ್ನು ಮಾಡಿ ಸಮುದಾಯದ, ಸದಸ್ಯರ ಸಂಕಷ್ಟಕ್ಕೆ ನೆರವಾಗಿದ್ದು, ಮುಂದಿನ ದಿನಗಳಲ್ಲಿಯೂ ಕೂಡ ಇದನ್ನು ಮುಂದುವರಿಸಿಕೊಂಡು ಹೋಗುವುದಾಗಿ ತಿಳಿಸಿದರು. ಉಪಪೊಲೀಸ್ ಆಯುಕ್ತರು, ರಾಷ್ಟ್ರಪತಿ ಪದಕ ಪುರಸ್ಕೃತರಾದ ಶ್ರೀ ಸುಧೀರ್ ಎಸ್. ಶೆಟ್ಟಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಮ್ಮ ಮಕ್ಕಳಿಗೆ ಹಿಂದಿನ ಕಟ್ಟುಪಾಡುಗಳು ಮತ್ತು ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಿ ಅವುಗಳನ್ನು ಮುಂದುವರಿಸಿಕೊಂಡು ಹೋಗಬೇಕಾದುದು ನಮ್ಮ ಕರ್ತವ್ಯ ಎಂದು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೆನರಾ ಹೈಡ್ರಾಲಿಕ್ಸ್ ಪ್ರೈ.ಲಿ. ಇದರ ಸಂಸ್ಥಾಪಕರು ಮತ್ತು ಆಡಳಿತ ನಿರ್ದೇಶಕರಾದ ಶ್ರೀ ಸಂತೋಷ್ ಎಂ. ಶೆಟ್ಟಿಯವರು ಭಾಗವಹಿಸಿ ಕೊರೋನಾ ಕಾರಣಗಳಿಂದ ತುರ್ತು ಅವಶ್ಯಕತೆಗಳಿಗೆ ರಕ್ತದ ಕೊರತೆ ಎದುರಾಗುತ್ತಿರುವ ಈ ಸಂದರ್ಭದಲ್ಲಿ ನೆತ್ತರ ನೆರವು ಕಾರ್ಯಕ್ರಮ ತುಂಬಾ ಮೆಚ್ಚುಗೆ ಪಡುವಂತದ್ದು, ಸಾಮಾಜಿಕ ಕೆಲಸಗಳಲ್ಲಿ ಎಲ್ಲರೂ ಜೊತೆಯಾಗಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಉಪಾಧ್ಯಕ್ಷರಾದ ಶ್ರೀ ಭೋಜರಾಜ ಶೆಟ್ಟಿಯವರು ಎಲ್ಲರನ್ನೂ ಅಭಿನಂದಿಸಿ ರಕ್ತದಾನದ ಮಹತ್ವವನ್ನು ತಿಳಿಸಿದರು. ಇದೇ ಸಂದರ್ಭದಲ್ಲಿ ಉಪಪೊಲೀಸ್ ಆಯುಕ್ತರು, ರಾಷ್ಟ್ರಪತಿ ಪದಕ ಪುರಸ್ಕೃತರಾದ ಶ್ರೀ ಸುಧೀರ್ ಎಸ್. ಶೆಟ್ಟಿ ಹಾಗೂ ಕೆನರಾ ಹೈಡ್ರಾಲಿಕ್ಸ್ ಪ್ರೈ.ಲಿ. ಇದರ ಸಂಸ್ಥಾಪಕರು ಮತ್ತು ಆಡಳಿತ ನಿರ್ದೇಶಕರಾದ ಶ್ರೀ ಸಂತೋಷ್ ಎಂ. ಶೆಟ್ಟಿಯವರನ್ನು ಗೌರವಿಸಲಾಯಿತು.

ನೆತ್ತರ ನೆರವು ಕಾರ್ಯಕ್ರಮದಲ್ಲಿ 180 ಯುನಿಟ್ ರಕ್ತ ಸಂಗ್ರಹಿಸಲಾಗಿದ್ದು, ರೆಡ್ ಕ್ರಾಸ್ ರಕ್ತ ನಿಧಿಗೆ ಹಸ್ತಾಂತರಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಂಘದ ಗೌರವ ಕಾರ್ಯದರ್ಶಿಯವರಾದ ಶ್ರೀ ಮಧುಕರ ಎಂ. ಶೆಟ್ಟಿಯವರು, ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಅಮೃತಾ ಎಸ್. ಶೆಟ್ಟಿಯವರು, ಜೊತೆ ಕಾರ್ಯದರ್ಶಿಯವರಾದ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರು, ಖಜಾಂಚಿಯವರಾದ ಶ್ರೀ ದೀಪಕ್ ಶೆಟ್ಟಿಯವರು, ಕಾರ್ಯಕಾರಿ ಸಮಿತಿ ಸದಸ್ಯರು, ಮಾಜಿ ಪದಾಧಿಕಾರಿಗಳು, ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ಸಮಿತಿ ಸದಸ್ಯರು ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು. ಕುಮಾರಿ ಪ್ರಜ್ಞಾ ಭಂಡಾರಿ ಮತ್ತು ಶ್ರೀ ಅಜಿತ್ ಶೆಟ್ಟಿಯವರು ಕಾರ್ಯಕ್ರಮವನ್ನು ನಿರೂಪಿಸಿದರು, ಶ್ರೀ ಭಾಸ್ಕರ ಶೆಟ್ಟಿಯವರು ವಂದನಾರ್ಪಣೆಗೈದರು.

**ಉಮೇಶ್ ಶೆಟ್ಟಿ ಎಂ.ಬಿ.**

ಚೇರ್‌ಪರ್ಸನ್, ಸಮಾಜ ಸೇವಾ ಸಮಿತಿ ಮತ್ತು ಸೇವಾದಳ

# ಭುಂಗ್ರೂ "BHUNGROO" (ಭೂಗರ್ಭಜಲಾಶಯ)
## ಒಂದು ದಿನದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ



ಯೂನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್ (ಐ.ಎ.ಎಸ್, ಐ.ಪಿ.ಎಸ್, ಕೆ.ಎ.ಎಸ್ ತರಬೇತಿಯೊಂದಿಗೆ ಪದವಿ, ಬಿ.ಎ. ಎಲ್.ಎಲ್.ಬಿ ಹಾಗೂ ಪಿ.ಯು.ಸಿ ಇಂಟಿಗ್ರೇಟೆಡ್) ನಲ್ಲಿ ದಿನಾಂಕ : 24/03/2021 ರಂದು ಮಧ್ಯಾಹ್ನ 3 ಗಂಟೆಗೆ 'ಭುಂಗ್ರೂ' (ಭೂಗರ್ಭ ಜಲಾಶಯ)ದ ಬಗ್ಗೆ ಒಂದು ದಿನದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಭುಂಗ್ರೂ ಪದ್ಧತಿಯ ಪರಿಕಲ್ಪನೆಯನ್ನು ಜಗತ್ತಿಗೆ ಪರಿಚಯಿಸಿದ ಸಂಪನ್ಮೂಲ ವ್ಯಕ್ತಿ ಹಾಗೂ ಸಂಶೋಧಕರಾದ ಗುಜರಾತ್ ರಾಜ್ಯದ ಎನ್.ಎಸ್.ಪಿ.ಎಲ್ ನ ಸಂಸ್ಥಾಪಕರು ಹಾಗೂ ನಿರ್ದೇಶಕರಾದ **ಶ್ರೀ ಬಿಪ್ಲಬ್ ಕೇತನ್ ಪಾಲ್** ಅವರು ಆಗಮಿಸಿ ಈ ಭುಂಗ್ರೂ ಪರಿಕಲ್ಪನೆಯನ್ನು ನಮ್ಮ ಕರ್ನಾಟಕ ರಾಜ್ಯಕ್ಕೆ ಪರಿಚಯಿಸುವ ಅನಿವಾರ್ಯತೆಯ ಬಗ್ಗೆ ಮಾತನಾಡಿದರು. ಭುಂಗ್ರೂ ಎನ್ನುವ ಹೊಸ ಪರಿಕಲ್ಪನೆಯ ಮೂಲಕ ನೀರಿನ ಸಮಸ್ಯೆಗೆ ಪರಿಹಾರ ಹುಡುಕುವ ಹಿನ್ನಲೆಯಲ್ಲಿ ಭೂಗರ್ಭ ಜಲಾಶಯದಲ್ಲಿ ಮಳೆ ನೀರನ್ನು ಸಂಗ್ರಹಿಸಿ ಸಮರ್ಪಕವಾಗಿ ಸದ್ಬಳಕೆ ಮಾಡಿಕೊಂಡು ನೀರಿನ ಅಗತ್ಯತೆಯನ್ನು ಪೂರೈಸಿಕೊಳ್ಳಬಹುದು ಎಂದು ಹೇಳಿದರು. ಎಂತಹ ನೀರಿನ ಸಮಸ್ಯೆಯಿದ್ದರೂ ಅದಕ್ಕೆ ಪರಿಹಾರ ಈ ಭುಂಗ್ರೂ ಆಗಿದೆ. ಜೊತೆಗೆ ಎಂತಹ ಭೂಮಿಯಿದ್ದರೂ ಈ ವಿಶಿಷ್ಟ ಪದ್ದತಿಯನ್ನು ಅಳವಡಿಸಿಕೊಳ್ಳಬಹುದಾಗಿದೆ ಇದರಿಂದ ನೀರಿನ ಬವಣೆಯನ್ನು ನೀಗಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಮುಂದೆ ಭವಿಷ್ಯವನ್ನು ನಿರ್ಮಾಣ ಮಾಡುವ ಆಫೀಸರ್‌ಗಳು ಹೇಗೆ ಈ ಯೋಚನೆಗಳನ್ನು ಯೋಜನೆ ಮಾಡಬೇಕಾಗಿದೆ ಎಂದು ಸೂಕ್ಷ್ಮವಾಗಿ ವಿವರಿಸಿದರು. ಭುಂಗ್ರೂ ಪದ್ಧತಿಯಿಂದ ಅಂತರ್ಜಲದ ಮಟ್ಟವನ್ನು ಹೆಚ್ಚಿಸಬಹುದು ಎಂದು ಹೇಳಿದರು. ಜೊತೆಗೆ ವಿಶೇಷ ಆಹ್ವಾನಿತರಾಗಿ ಪ್ರಜಾವಾಣಿಯ ಸಂಪಾದಕರಾದ **ರವೀಂದ್ರ ಭಟ್ ರವರು** ಮಾತನಾಡಿ

ನಮ್ಮ ಸಮಾಜದಲ್ಲಿ ನೀರಿನ ಸಮಸ್ಯೆಗಳ ವಿವಿಧ ನೆಲೆಗಳನ್ನು ಪರಿಚಯಿಸುತ್ತಾ, ಪುರಾತನ ಕಾಲದಿಂದಲೂ ಸ್ಥಳೀಯವಾಗಿ ನೀರಿನ ಸಂರಕ್ಷಣೆಗೆ ಹಲವಾರು ವಿಭಿನ್ನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಅತ್ಯಂತ ಸರಳ ತಂತ್ರಗಳನ್ನು ಬಳಸಿಕೊಂಡು ನೀರನ್ನು ಸಂಗ್ರಹಿಸಿ ಬಳಸುತ್ತಿದ್ದರು. ನಮ್ಮ ಮನೆಯಲ್ಲಿಯೇ ಮಳೆ ನೀರು ಕೊಯ್ಲು ಮಾಡುವುದರ ಮೂಲಕ ಹಾಗೂ ಸೋಲಾರ್ ವಿದ್ಯುತ್‌ನ್ನು ಬಳಸುವುದರ ಮೂಲಕ ಯಾವುದೇ ವ್ಯಕ್ತಿ ಹಾಗೂ ಸಂಸ್ಥೆಯ ಮೇಲೆ ಅವಲಂಬನೆಯಾಗದೇ ಬದುಕಲು ಸಾಧ್ಯವಾಗಿದೆ ಎಂದು ಹೇಳಿದರು. ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ **ಡಾ. ಅಶೋಕ್ ಡಿ. ಹಂಜಗಿಯವರು** ಭಾಗವಹಿಸಿ ನಾವುಗಳು ಒಂದು ಸಮಾಜದ ಭಾಗವಾಗಿ ಪರಿಸರದಲ್ಲಿ ಉಂಟಾಗುತ್ತಿರುವ ಹವಾಮಾನ ಬದಲಾವಣೆಯಿಂದ ಗಂಭೀರ ಆಪಾಯುಗಳನ್ನು ಎದುರಿಸುತ್ತಿದ್ದೇವೆ. ನಿಸರ್ಗ ಕೇಂದ್ರಿತವಾದ ಬದುಕನ್ನು ಕಟ್ಟಿಕೊಳ್ಳುವುದು ಅನಿವಾರ್ಯವಾಗಿದೆ. ಭವಿಷ್ಯದ ಜನಾಂಗವನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಯೂನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್ ನ ಛೇರ್ಮನ್ ಹಾಗೂ ಶಿಕ್ಷಣ ತಜ್ಞರಾದ **ಆರ್. ಉಪೇಂದ್ರ ಶೆಟ್ಟಿಯವರು** ಮಾತನಾಡಿ ಸುಸ್ಥಿರ ಅಭಿವೃದ್ಧಿಯಿಂದ ಮಾತ್ರ ಈ ನಿಸರ್ಗದಲ್ಲಿರುವ ಜಲವನ್ನು ಕಾಪಾಡಲು ಸಾಧ್ಯ, ಇಲ್ಲದ್ದಿದ್ದರೆ ನೀರಿಗಾಗಿ ಮಹಾಯುದ್ಧಗಳು ನಡೆಯುವುರಲ್ಲಿ ಯಾವುದೇ ಅನುಮಾನವಿಲ್ಲ ಎಂದು ನುಡಿದರು. ಭವಿಷ್ಯದಲ್ಲಿ ಮಳೆ ನೀರನ್ನು ಸಂಗ್ರಹ ಮಾಡಲು ತೊಡಗದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ, ಹಾಗಾಗಿ ನಮ್ಮ ದೇಶದಲ್ಲಿ ನೀರು ಸಂಗ್ರಹ ಮಾಡುವ ಅತ್ಯುನ್ನತ ಪದ್ಧತಿಯಲ್ಲಿ ಭುಂಗ್ರೂ ವಿಶಿಷ್ಟವಾದುದಾಗಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಯೂನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಎಲ್ಲಾ ಬೋಧಕ ಹಾಗೂ ಬೋಧಕೇತರ ವರ್ಗದವರು ಭಾಗವಹಿಸಿ ವಿಚಾರ ಸಂಕಿರಣವನ್ನು ಯಶಸ್ವಿ–ಗೊಳಿಸಿದರು. ಆಡಳಿತಾಧಿಕಾರಿಯಾದ ಜೆ. ಸಂತೋಷ್ ಶೆಟ್ಟಿಯವರು ಸ್ವಾಗತವನ್ನು ಕೋರಿದರು, ಪ್ರಾಂಶುಪಾಲರಾದ ವಿಶ್ವಾಸ್ ಪುಟ್ಟಸ್ವಾಮಿ ವಂದನಾರ್ಪಣೆ ಮಾಡಿದರು.

# ಬೆಳ್ಳಿ ದೀಪನಾ ಅಥವಾ ಮಣ್ಣಿನ ಹಣತೆನಾ!?

ಅದು ಸಂಜೆಯ ಸಮಯ ಎಲ್ಲರೂ ಚಹಾ ಕುಡಿಯುತ್ತ ಒಂದೆರಡು ಬಿಸ್ಕೆಟ್ ತಿನ್ನುತ್ತಾ ಇವತ್ತಿನ ದಿನಚರಿಯನ್ನು ಮೆಲುಕು ಹಾಕತೊಡಗಿದೆವು.

ಮಾತು ದೇವರ ಪೂಜೆಯ ಬಗ್ಗೆ ಶುರುವಾಯಿತು, ಒಬ್ಬರು ದೇವರಿಗೆ ತುಪ್ಪದ ದೀಪವನ್ನು ಬೆಳ್ಳಿಯ ಹಣತೆಯಲ್ಲಿ ಹಚ್ಚಿದರೆ ಶ್ರೇಷ್ಠ ಅಂದರು, ಈ ಮಾತಿಗೆ ನಾನು ಉತ್ತರಿಸಿದ್ದು ಇಷ್ಟೆ, ಸೃಷ್ಟಿಕರ್ತನಾದ ದೇವರು ಲೋಕದಲ್ಲಿ ಬಡವರು ಶ್ರೀಮಂತರನ್ನು ಸೃಷ್ಟಿಸಿದ್ದಾನೆ. ಹಾಗಿದ್ದಲ್ಲಿ, ಬಡವರ ಮನೆಯ ಮಣ್ಣಿನ ಹಣತೆ ಶ್ರೇಷ್ಠವಲ್ಲವೇ? ಭೂಮಿಯ ಶುದ್ಧ ಮಣ್ಣಿನಿಂದ ಮಾಡಿದ ಹಣತೆ ಶ್ರೇಷ್ಠ ಎಂಬುದು ನನಗನಿಸಿತು.

"ದೇವರ ಧ್ಯಾನಕ್ಕೆ ಶುದ್ಧ ಮನಸ್ಸು ಮುಖ್ಯ ಎಂಬುದು ನನ್ನ ನಂಬಿಕೆ"

**ಭೂಮಿಕ ಪ್ರದೀಪ್ ಶೆಟ್ಟಿ**

# ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ
# ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ




ಕಳೆದ ಸಾಲಿನಲ್ಲಿ ವಿಜೃಂಭಣೆ, ಸಡಗರ, ಸಂಭ್ರಮಗಳೊಂದಿಗೆ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂತಿಮ ಕ್ಷಣಗಳಲ್ಲಿ ಪ್ರಾಕೃತಿಕ ವಿಕೋಪದ ಕರಿ ನೆರಳಿನಿಂದ ಮುಂದೂಡಲ್ಪಟ್ಟು, ನಿರಾಶೆ, ಆತಂಕ ಜೊತೆಗೆ ಕಲಾವಿದರ ಅನುಕಂಪಕ್ಕೂ ಎಡೆ ಮಾಡಿಕೊಟ್ಟಿತು.

ಸಂಕೀರ್ಣದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹ, ಆಶೀರ್ವಾದದೊಂದಿಗೆ ಸಾಂಕೇತಿಕ ಹಾಗೂ ಸರಳ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದಿನಾಂಕ 13.03.2021ರಂದು ನಮ್ಮ ಸುಂದರ ಸಭಾಂಗಣದಲ್ಲಿ ಅಪರಾಹ್ನ 2 ಗಂಟೆಗೆ ಸರಿಯಾಗಿ ಸಂಘದ ಉಪಾಧ್ಯಕ್ಷರಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ, ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಅಮೃತ ಎಸ್. ಶೆಟ್ಟಿ, ಜೊತೆ ಕಾರ್ಯದರ್ಶಿ ಸೌಮ್ಯಪ್ರಿಯ ಹೆಗ್ಡೆ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಸಮ್ಮುಖದಲ್ಲಿ ದೀಪ ಬೆಳಗುವುದರೊಂದಿಗೆ ವಿಧ್ಯುಕ್ತವಾಗಿ ಉದ್ಘಾಟಿಸಲ್ಪಟ್ಟಿತು. ಮಹಿಳಾ ವಿಭಾಗದ ಸದಸ್ಯೆಯರಿಂದ ಬಂಟರ ಹಾಡು ಪ್ರಸ್ತುತ.

ಅಂತರ ಸಂಘಗಳಿಗೆ ಮುಕ್ತ ಅವಕಾಶವನ್ನು ಕಲ್ಪಿಸುವ ನಿಟ್ಟಿನಲ್ಲಿ ಚುಟುಕು ನಾಟಕ ಪ್ರಹಸನ / ನೃತ್ಯ ರೂಪಕವನ್ನು ಹಮ್ಮಿಕೊಳ್ಳಲಾಗಿತ್ತು. 7 ತಂಡಗಳು ಭಾಗವಹಿಸಿ, ತಮ್ಮ ನಟನಾ ಕೌಶಲ್ಯ ಮೆರೆದರು. ಶ್ರೀಮತಿ ರಾಜಶ್ರೀ ಕೆ. ಶೆಟ್ಟಿಯವರು ಕಾರ್ಯಕ್ರಮದ ನಿರೂಪಣೆಯನ್ನು ಸುಂದರವಾಗಿ ನಿರ್ವಹಿಸಿಕೊಟ್ಟರು. ಸಂಜೆ ಲಘು ಉಪಹಾರ ಏರ್ಪಡಿಸಲಾಗಿತ್ತು.

ಸುಂದರ ಸಂಜೆಯಲ್ಲಿ ಮೂಡಿಬಂದ ವಿಶೇಷ ಆಕರ್ಷಣೆ ಮಹಿಳಾ ಸದಸ್ಯೆಯರು ಹಾಗೂ ಕಾರ್ತೀಸ್ ಪರ್ಫಾಮಿಂಗ್ ಆರ್ಟ್ಸ್‌ನ ಕಾರ್ತಿಕ್ ಬಿ. ಶೆಟ್ಟಿಯವರ ದಕ್ಷ ನಿರ್ದೇಶನದೊಂದಿಗೆ ಮೂಡಿಬಂದ "ಪಾಂಚಾಲಿ" ನೃತ್ಯ ರೂಪಕ ನೆರೆದ ಸಭಿಕರನ್ನು ಮಂತ್ರ ಮುಗ್ಧರನ್ನಾಗಿಸಿತು. ಶ್ರೀಮತಿ ಕೃತಿ ಬಿ. ಶೆಟ್ಟಿಯವರು ಕಾರ್ತಿಕ್ ಬಿ. ಶೆಟ್ಟಿಯವರೊಂದಿಗೆ ಜೊತೆಗೂಡಿ ಸಂಯೋಜಿಸಿದ ಪಾಂಚಾಲಿ ನೃತ್ಯ ರೂಪಕ ಹವ್ಯಾಸಿ ಕಲಾವಿದರ ಪ್ರತಿಭೆಯನ್ನು ಅನಾವರಣಗೊಳಿಸಿತೆಂದರೂ ತಪ್ಪಾಗಲಾರದು. ಶೆಟ್ಟರ ಪರಿಕಲ್ಪನೆಯ ವಸ್ತ್ರವಿನ್ಯಾಸ, ವಿಭಿನ್ನ ಶೈಲಿಯ ಕಿರೀಟಧಾರಣೆ, ಬೆಳಕಿನ, ಸಂಗೀತದ ನಿನಾದ, ಧ್ವನಿ ಸಂಕಲನ, ಸುಮಾರು 20 ಕಲಾವಿದರು (ನೃತ್ಯಗಾರ್ತಿಯರು) ಪೌರಾಣಿಕ ಸ್ತ್ರೀ ಪ್ರಧಾನ ವಿಷಯಧಾರಿತ ಕಥಾನಕದ ಪ್ರಸ್ತುತಿ ಮಹಿಳಾ ದಿನಾಚರಣೆಗೆ ಹಿಡಿದ ಕೈಗನ್ನಡಿ.




ಕಾರ್ತಿಕ್ ಬಿ. ಶೆಟ್ಟಿ ಯುವ ಪ್ರತಿಭೆ, ತನ್ನ ಸಂಯೋಜನೆಯಲ್ಲಿ ಯಶಸ್ಸು, ಹೆಸರು ಗಳಿಸುತ್ತಾ ಮುಂದಿನ

ದಿನಗಳಲ್ಲಿ ಶ್ರೇಷ್ಠ ನೃತ್ಯ ರೂಪಕಗಳನ್ನು ಸಾದರ ಪಡಿಸಲೆಂಬುದೇ ನಮ್ಮ ನಿಮ್ಮೆಲ್ಲರ ಆಶಯ.

ಮುಸ್ಸಂಜೆಯ ಆಹ್ಲಾದಕರ ವಾತಾವರಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟರು, ಶ್ರೀಮತಿ ಸಂಧ್ಯಾ ಶೆಣ್ಯೆ, ಡಾ. ಮಮತ ಶೆಟ್ಟಿ, ಶ್ರೀಮತಿ ಉಷಾ ಪಿ. ರೈ ಹಾಗೂ ಸಂಘದ ಪದಾಧಿಕಾರಿಗಳು ಭಾಗವಹಿಸಿದರು. ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ ತಂಡದವರಿಂದ ಸುಶ್ರಾವ್ಯ ಪ್ರಾರ್ಥನೆಯ ನಂತರ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈಯವರು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯಾತಿಗಣ್ಯರನ್ನು ಹಾಗೂ ನೆರೆದ ಬಂಧುಗಳನ್ನು ಹೃದಯಸ್ಪರ್ಶಿ ಸ್ವಾಗತದೊಂದಿಗೆ ಗಣ್ಯರ ಉದ್ಘಾಟನೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಭಾಕಾರ್ಯಕ್ರಮದಲ್ಲಿ ಖ್ಯಾತ ಮಹಿಳಾ ಲೇಖಕಿ, ಶ್ರೇಷ್ಠ ಬ್ಯಾಂಕರ್, ಸ್ನೇಹ ಚಿಂತನೆಯ ಮಾಜಿ ಸಂಪಾದಕಿಯಾದ ಶ್ರೀಮತಿ ಉಷಾ ಪಿ.ರೈಯವರನ್ನು ಪ್ರೀತ್ಯಾದರಗಳೊಂದಿಗೆ ಸನ್ಮಾನಿಸಲಾಯಿತು. ಸನ್ಮಾನಕ್ಕೆ ಉತ್ತರಿಸುತ್ತಾ, ಬಂಟರ ಸಂಘದ ಮಹಿಳಾ ವಿಭಾಗ ಹಾಗೂ ಸಂಘದ ಚಟುವಟಿಕೆಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ವಿಶೇಷವಾಗಿ ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟರ ಒಡನಾಟವನ್ನು ಸ್ಮರಿಸಿಕೊಂಡರು. ಖ್ಯಾತ ಸ್ತ್ರೀ ರೋಗ ತಜ್ಞೆ ಡಾ. ಮಮತಾ ಶೆಟ್ಟಿ ಸಂದರ್ಭೋಚಿತವಾಗಿ ಮಾತನಾಡಿ, ಸಂಘದ ಮಹಿಳಾ ಸದಸ್ಯೆಯರ ಸಂಘಟನೆ, ಕ್ರೀಯಾಶೀಲ ಚಟುವಟಿಕೆಗಳಿಗೆ ಮೆಚ್ಚುಗೆ ಸೂಚಿಸಿದರು.

ಕೊನೆಯಲ್ಲಿ ಕರಾವಳಿಯಿಂದ ಆಗಮಿಸಿದ ಹಾಸ್ಯ ಕಲಾವಿದೆ ಸಂಧ್ಯಾ ಶೆಣೈಯವರು ಸುಮಾರು 45 ನಿಮಿಷಗಳ ಕಾಲ ನಿರರ್ಗಳ ಹಾಸ್ಯದ ಹೊನಲನ್ನು ಹರಿಸಿ, ಜೊತೆಯಲ್ಲಿ ಆಧುನಿಕ ಜೀವನ ಶೈಲಿ, ನಡೆದು ಬಂದ ಜೀವನದ ಹೆಜ್ಜೆ ಗುರುತುಗಳನ್ನು ಸ್ಮರಿಸುತ್ತಾ ನೆರೆದ ಬಂಧುಗಳನ್ನು ಸಂತಸ, ಸಂಭ್ರಮದ ವಾತಾವರಣಕ್ಕೆ ಕೊಂಡೊಯ್ದರು. ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಆರ್. ಉಪೇಂದ್ರ ಶೆಟ್ಟರು ಶ್ರೀಮತಿ ಉಷಾ ಪಿ. ರೈಯವರ ಯುವ ಪ್ರತಿಭೆಗಳೊಂದಿಗಿನ ಒಡನಾಟ, ಸಲಹೆ, ಸೂಚನೆಗಳನ್ನು ಸ್ಮರಿಸಿಕೊಂಡರು. ಮಹಿಳಾ ವಿಭಾಗ ಉಷಕ್ಕನನ್ನು ಸನ್ಮಾನಿಸಿ, ಯೋಗ್ಯ ಹಾಗೂ ಸೂಕ್ತ ಆಯ್ಕೆ ಮಾಡಿರುವುದಾಗಿ ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಖ್ಯಾತ ನಿರೂಪಕಿ ಶ್ರೀಮತಿ ರೇವತಿ ಶೆಟ್ಟಿ ನಡೆಸಿಕೊಟ್ಟರು. ಎಲ್ಲಾ ಸ್ಪರ್ಧಾ ವಿಜೇತರಿಗೆ ಬಹುಮಾನ ಹಾಗೂ ತಂಡಗಳಿಗೆ ಸ್ಮರಣಿಕೆ ನೀಡಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಸಂಚಾಲಕಿ ಶ್ರೀಮತಿ ಯೋಗ್ಯ ಎಲ್. ರೈಯವರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಧನ್ಯತಾ ಭಾವದ ಲೇಪನವನ್ನು ನೀಡಲಾಯಿತು.

ಒಟ್ಟಿನಲ್ಲಿ ಹೊಸತನದ ಹುಡುಕಾಟದಲ್ಲಿ ನಮ್ಮ ಮಹಿಳಾ ವಿಭಾಗದ ಕ್ರೀಯಾಶೀಲ ಸದಸ್ಯೆಯರ ಬಹಳಷ್ಟು ಪರಿಶ್ರಮದಿಂದಾಗಿ ಮಹಿಳಾ ದಿನಾಚರಣೆ ಅರ್ಥಪೂರ್ಣ ಹಾಗೂ ಭಾವಪೂರ್ಣವಾಗಿ ಮೂಡಿಬಂತು. ಕಾರ್ಯಕ್ರಮದಲ್ಲಿ ಮಾಜಿ ಪದಾಧಿಕಾರಿಗಳು ಭಾಗವಹಿಸಿದ್ದರು.

ಕೆಳಕಂಡ ಮಹನೀಯರು ಕಾರ್ಯಕ್ರಮದ ಯಶಸ್ಸಿಗೆ ತನು, ಮನ, ಧನ ನೀಡಿ ಸಹಕರಿಸಿದ್ದಾರೆ.

1. ಶ್ರೀಮತಿ ಮಮತ ಎಸ್. ಶೆಟ್ಟಿ
2. ಶ್ರೀ ಕೆ. ಪ್ರಕಾಶ್ ಶೆಟ್ಟಿ, ಎಂ.ಆರ್.ಜಿ ಗ್ರೂಪ್
3. ಶ್ರೀ ಜಯಪ್ರಸಾದ್ ಶೆಟ್ಟಿ
4. ಶ್ರೀ ಬಾಲಕೃಷ್ಣ ಹೆಗ್ಡೆ
5. ಶ್ರೀಮತಿ ಮೀರಾ ಡಿ. ಶೆಟ್ಟಿ
6. ಶ್ರೀ ಉಮೇಶ್ ಶೆಟ್ಟಿ, ಕಾರ್ಪೋರೇಟರ್
7. ಡಾ. ಎಸ್.ಆರ್ ಶೆಟ್ಟಿ, ಇಳಕಲ್
8. ಶ್ರೀಮತಿ ಸುಜಾತ ಯು. ಹೆಗ್ಡೆ
9. ಶ್ರೀಮತಿ ಗೀತಾ ಎಲ್.ಎನ್. ಶೆಟ್ಟಿ
10. ಶ್ರೀ ರವೀಂದ್ರನಾಥ ಮಾರ್ಲ
11. ಶ್ರೀ ಸುಧಾಕರ ಎಸ್. ಶೆಟ್ಟಿ, ಶ್ರೇಯಾಸ್ ಸಿರಾಮಿಕ್ಸ್
12. ಶ್ರೀಮತಿ ಮುಕ್ತಾ ಯು. ಶೆಟ್ಟಿ
13. ಶ್ರೀ ಮುರಳೀಧರ ಹೆಗ್ಡೆ
14. ಶ್ರೀಮತಿ ಲತಾ ಜೆ. ಶೆಟ್ಟಿ

15. ಶ್ರೀ ಬಾಲಾಜಿ ಸೂಡ
16. ಶ್ರೀ ಶ್ರೀನಿವಾಸ ಸೂಡ
17. ಶ್ರೀ ಅರವಿಂದ ಶೆಟ್ಟಿ
18. ಶ್ರೀಮತಿ ಪುಷ್ಪಲತಾ ಬಿ. ಶೆಟ್ಟಿ
19. ಶ್ರೀ ವೆಂಕಪ್ಪ ಹೆಗ್ಡೆ
20. ಶ್ರೀಮತಿ ಹೇಮಲತಾ ವಿ. ಶೆಟ್ಟಿ
21. ಶ್ರೀಮತಿ ಜಯಶ್ರೀ ಸಿ. ರೈ
22. ಶ್ರೀಮತಿ ಯೋಗ್ಯ ಎಲ್. ರೈ
23. ಶ್ರೀಮತಿ ಮಾಲಾ ಎ. ಶೆಟ್ಟಿ
24. ಶ್ರೀಮತಿ ಹೀರಾ ಹೆಚ್. ಶೆಟ್ಟಿ
25. ಶ್ರೀಮತಿ ಗೀತಾ ಎ. ಶೆಟ್ಟಿ
26. ಶ್ರೀಮತಿ ಶ್ಯಾಮಲ ಶೆಟ್ಟಿ
27. ಶ್ರೀಮತಿ ಜ್ಯೋತಿ ಎಸ್. ಶೆಟ್ಟಿ
28. ಶ್ರೀಮತಿ ವಿಜಯಲಕ್ಷ್ಮೀ ಕೊಡ್ಲಾಡಿ
29. ಭೈರಪ್ಪ ಆ್ಯಂಡ್ ಸನ್ಸ್
30. ಶ್ರೀಮತಿ ಮಂಜುಳ ಶೆಟ್ಟಿ
31. ಶ್ರೀಮತಿ ಮಲ್ಲಿಕ ಕೆ. ಶೆಟ್ಟಿ

ವಂದನೆಗಳೊಂದಿಗೆ,

**ಶ್ರೀಮತಿ ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ

# ಅಭಿನಂದನೆಗಳು



ಕಳೆದ ಹಲವಾರು ವರ್ಷಗಳಿಂದ ಸ್ವಯಂ ಸೇವಕರಾಗಿ, ಹಿರಿಯ ಟ್ರಾಫಿಕ್ ವಾರ್ಡನ್ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀ ರಾಜಾರಾಮ್ ಶೆಟ್ಟಿ ಉಪ್ಪಳರನ್ನು ಕೋವಿಡ್ ಸಮಯದಲ್ಲಿ ತಮ್ಮ ನಿಸ್ವಾರ್ಥ ಸೇವೆಗಾಗಿ ಬೆಂಗಳೂರು ಪೊಲೀಸ್ ಕಮಿಷನರ್ ಶ್ರೀ ಭಾಸ್ಕರರಾವ್, ಐ.ಪಿ.ಎಸ್ ರವರು ಗೌರವಿಸಿದರು.

ಟ್ರಾಫಿಕ್ ವಾರ್ಡನ್ ಸಂಸ್ಥೆ ಒಂದು ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಟ್ರಾಫಿಕ್ ಮತ್ತು ವಿ.ವಿ.ಐ.ಪಿ. ಸಂಚಾರ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಪೊಲೀಸರಿಗೆ ನೆರವಾಗುತ್ತದೆ. ಶ್ರೀಯುತ ರಾಜಾರಾಮ್ ಶೆಟ್ಟಿಯವರು ಬೆಂಗಳೂರು ಟ್ರಾಫಿಕ್ ಸಂಸ್ಥೆಯಲ್ಲಿರುವ ಏಕಮೇವ ಬಂಟರು. ಇವರಿಗೆ ಬಂಟರ ಸಂಘದ ಪರವಾಗಿ ಅಭಿನಂದನೆಗಳು.

ನಮ್ಮ ಬಂಟ ಬಾಂಧವರಲ್ಲಿ ಯಾರಾದರೂ ಸ್ವಯಂ ಪ್ರೇರಿತರಾಗಿ ಟ್ರಾಫಿಕ್ ವಾರ್ಡನ್ ಆಗಿ ಕೆಲಸ ಮಾಡಲು ಇಚ್ಛಿಸಿದಲ್ಲಿ ಶ್ರೀ ರಾಜಾರಾಮ್ ಶೆಟ್ಟಿಯವರನ್ನು ಸಂಪರ್ಕಿಸಬಹುದು. ಮೊಬೈಲ್ ಸಂಖ್ಯೆ 9845266694

### ಬಂಟರ ಸಂಘ ಬೆಂಗಳೂರು

## ಯುವ ವಿಭಾಗ ಮತ್ತು ವಿವಾಹ ವೇದಿಕೆ ಸಮಿತಿ

### ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II (ಯಲಚಗುಪ್ಪೆ) ಪ್ರವೇಶ ಅಭಿಯಾನ



ದಿನಾಂಕ 07.03.2021ರಂದು ಬಂಟರ ಸಂಘದ ಯುವ ವಿಭಾಗ ಮತ್ತು ವಿವಾಹ ವೇದಿಕೆ ಸಮಿತಿಯು ಜಂಟಿಯಾಗಿ ಬೆಂಗಳೂರು ಬಂಟರ ಸಂಘವು ಯಲಚಗುಪ್ಪೆಯಲ್ಲಿ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II ಎನ್ನುವ ಹೆಸರಿನಲ್ಲಿ ವಿವಿಧ ಸೌಕರ್ಯಗಳನ್ನೊಳಗೊಂಡ ಆಧುನಿಕ ಶೈಲಿಯಲ್ಲಿ ನಿರ್ಮಿಸಿದ ಶಾಲಾ ಕಟ್ಟಡವನ್ನು ಸಂಘದ ಸದಸ್ಯರೆಲ್ಲರೂ ನೋಡಬೇಕೆನ್ನುವ ಅಪೇಕ್ಷೆಯಿಂದ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು. ಸಂಘದ ಸದಸ್ಯರಿಗೆ ಪ್ರಯಾಣಿಸಲು ಅನುಕೂಲವಾಗುವಂತೆ ಬಸ್ ವ್ಯವಸ್ಥೆಯನ್ನು ಮಾಡಲಾಗಿತ್ತು. ಸಂಘದ ಸದಸ್ಯರು ಬಸ್ಸುಗಳು ಹಾಗೂ ತಮ್ಮದೇ ಕಾರುಗಳಿಂದ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ಶಾಲೆ, ಕಾಲೇಜು ಹಾಗೂ ಹಾಸ್ಟೆಲ್ ಕಟ್ಟಡಗಳನ್ನು ಹಾಗೂ ಇನ್ನಿತರ ಸೌಕರ್ಯಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಸುಮಾರು 10ಕ್ಕೂ ಹೆಚ್ಚು ಜನರು ಸ್ಥಳದಲ್ಲೇ ತಮ್ಮ ಮಕ್ಕಳಿಗೆ ಪ್ರವೇಶ ಪಡೆಯಲು ಮುಂದಾದರು.

ಈ ಅಭಿಯಾನದಲ್ಲಿ ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಮಧುಕರ ಎಂ. ಶೆಟ್ಟಿ, ಮಹಿಳಾ ಉಪಾಧ್ಯಕ್ಷರಾದ ಶ್ರೀಮತಿ ಅಮೃತಾ ಎಸ್. ಶೆಟ್ಟಿ, ಜೊತೆ ಕಾರ್ಯದರ್ಶಿಗಳಾದ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿದ್ದರು. ಆರ್.ಎನ್.ಎಸ್ ವಿದ್ಯಾನಿಕೇತನ–II ಇದರ P.R.O. ರವರಾದ ಶ್ರೀಮತಿ ಪವಿತ್ರ ಶೆಟ್ಟಿಯವರು ಹೊಸದಾಗಿ ನಿರ್ಮಿಸಿದ ವಿದ್ಯಾಸಂಸ್ಥೆಯ ತರಗತಿಗಳನ್ನು ಹಾಗೂ ಇನ್ನಿತರ ಮೂಲ ಸೌಕರ್ಯಗಳ ಬಗ್ಗೆ ಸವಿವರವಾಗಿ ಸದಸ್ಯರಿಗೆ ವಿವರಿಸಿದರು.

ಯುವ ವಿಭಾಗದ ಚೇರ್‌ಪರ್ಸನ್ ಡಾ. ವೈ ಉಮಾನಾಥ ಶೆಟ್ಟಿ ಹಾಗೂ ವಿವಾಹ ವೇದಿಕೆ ಚೇರ್‌ಪರ್ಸನ್ ಶ್ರೀಮತಿ ತಾರಾಮಣಿ ಹೆಗ್ಡೆಯವರು ಭಾಗವಹಿಸಿದ ಎಲ್ಲಾ ಸದಸ್ಯರಿಗೆ ಧನ್ಯವಾದವನ್ನು ಸಲ್ಲಿಸಿದರು.

**ಡಾ. ವೈ ಉಮಾನಾಥ ಶೆಟ್ಟಿ**
ಚೇರ್‌ಪರ್ಸನ್, ಯುವ ವಿಭಾಗ

**ಶ್ರೀಮತಿ ತಾರಾಮಣಿ ಹೆಗ್ಡೆ**
ಚೇರ್‌ಪರ್ಸನ್, ವಿವಾಹ ವೇದಿಕೆ ವಿಭಾಗ

# ಹೀಗೊಂದು ಅಜ್ಜಿ ಕಥೆ



ಮೋಹನ್ ಮಾರ್ನಾಡ್

ಅಜ್ಜಿ ಇಲ್ಲ.

ಇವತ್ತೂ ಹೋಗಿ ನೋಡಿದೆ. ದಿನಾ ಕೂರುವ ಜಾಗದಲ್ಲಿ ಅಜ್ಜಿ ಕಾಣಿಸ್ತಿಲ್ಲ. ಎಲ್ಲಿ ಹೋಗಿರಬಹುದು? ಹಣ್ಣು ಹಣ್ಣು ಮುದುಕಿ ಅಲ್ಲದಿದ್ದರೂ ಅದು ಸಿಂಗಲ್ ಹಣ್ಣು ಮುದುಕಿ ಅಂತೂ ಹೌದು. ಮುಖದಲ್ಲಿ ಕೈಗಳಲ್ಲಿ ಎದ್ದು ನರ್ತಿಸುತ್ತಿರುವ ಆಕರ್ಷಕ ನರಗಳು ಆಕೆಯನ್ನು ಅಷ್ಟು ವರ್ಷ ಆಳಿದ ಗತವನ್ನು ಸಾರುತ್ತಿದ್ದವು. ಮುಖದಲ್ಲೊಂದು ಆತ್ಮೀಯ ನಗು ಬ್ರಹ್ಮ ಮೊದಲೇ ಫಿಕ್ಸ್ ಮಾಡಿಬಿಟ್ಟಿದ್ದ. ಲಂಕೇಶರ "ಅವ್ವ" ಇರಬಹುದೆ ಆಕೆ? ಈ ಸೂರ್ಯಾಸ್ತದಲ್ಲೂ ತನ್ನ ಬದುಕು ಹಸನಾಗಿಸಬಹುದು ಅನ್ನುವ ಆಕೆಯ ನಿರೀಕ್ಷೆಯನ್ನು ನೋಡುವಾಗ ನನಗೆ ಅವಳಲ್ಲಿ ಶಬರಿ ಕೂಡ ಕಾಣುತ್ತಿದ್ದಾಳೆ. ಆದರೆ ನನಗ್ಯಾಕೆ ಅವಳನ್ನು ನೋಡುವ ಕಾತರ? ಒಮ್ಮೆ ಆಕೆಯ ಕಣ್ಣುಗಳಲ್ಲಿ ನೀರು ಉಕ್ಕುವಂತೆ ಮಾಡುವುದನ್ನು ಬಿಟ್ಟರೆ ನನಗೂ ಆಕೆಯ ಇನ್ಯಾವುದೇ ಗುರುತು ಪರಿಚಯ ಇಲ್ಲ.

ಸುಮಾರು ಎಂಟು ತಿಂಗಳ ಕೋವಿಡ್ ಬಂಧನದ ನಂತರ ದುಡಿಮೆ ಎಂಬ ದೇವರನ್ನು ಆರಾಧಿಸಲು ಹೊರಟು ನಿಂತು ಆಗಲೇ ಎರಡು ತಿಂಗಳು ಕಳೆದವು. ನನ್ನ ಸಾರಥಿ ಲಾಕ್‌ಡೌನ್ ಘೋಷಣೆಯಾದ ಮರು ತಿಂಗಳಲ್ಲೇ ಊರತ್ತ ಮುಖ ಮಾಡಿದ ಕಾರಣ ನನ್ನ ಕಾಲುಗಳೇ ನನಗೆ ವಾಹನ. ಸಾಂತಾಕ್ರೂಸ್ ಸ್ಟೇಶನ್ ತನಕ ರಿಕ್ಷಾದಲ್ಲಿ ಹೋಗಿ ಪಶ್ಚಿಮಕ್ಕೆ ನಡೆದೇ ಹೋಗುತ್ತಿದ್ದೆ. ಕಾರಣ ಅಲ್ಲೇ ಪಕ್ಕ ನಮ್ಮ ಕಾಯಕ ನಡೆಯುವ ಕೈಲಾಸ.

ವೆಸ್ಟಲ್ಲಿ ಓವರ್ ಬ್ರಿಜ್ ಇಳಿದು ಮಾರ್ಗ ಸೇರುವ ತುದಿಯಲ್ಲಿ ಈ ಅವ್ವ ಒಂದು ಬುಟ್ಟಿಯಲ್ಲಿ ನಾನಾ ತರದ ಲೋನಾವಾಳ ಚಿಕ್ಕಿಗಳನ್ನು ಇಟ್ಟುಕೊಂಡು ಕೊಳ್ಳುವವರ ನಿರೀಕ್ಷೆಯಲ್ಲಿರುವುದು ಕಾಣುತ್ತದೆ. ಅದೆಷ್ಟು ಸಂಪಾದಿಸ್ತಾಳೊ... ಯಾರೂ ಕೊಂಡುಕೊಳ್ಳುವುದನ್ನು ನಾನಂತೂ ಕಂಡಿಲ್ಲ. ಬುಟ್ಟಿಯಲ್ಲಿರುವ ಚಿಕ್ಕಿಗಳ ಪ್ರಮಾಣ ದಿನಾ ಕಣ್ಣಿಗೆ ಬೀಳುವುದರಿಂದ ಅದು ನನ್ನ ಕಂಠದಲ್ಲಿ ಕರ್ಣನ ರಥದಂತೆ ಹೂತು ಹೋಗಿತ್ತು. ಆಕೆಯ ಬಲಗೈ ಮೊಣಕಾಲಿಗೂ ಬಲ ಕೆನ್ನೆಗೂ ಸಂಪರ್ಕ ಸೇತುವಾಗಿ ಬೇಲೂರ ಗುಡಿಯ ಶಿಲ್ಪದಂತೆ ಶಾಶ್ವತವಾಗಿ ಊರಿ ಹೋಗಿತ್ತು. ನನಗೋ ದಿನಾ ಆಕೆಯ ಪ್ರಸನ್ನ ಮುಖವನ್ನು ನೋಡುತ್ತಾ ಓವರ್ ಬ್ರಿಜ್‌ನಿಂದ ಕೆಳಗಿಳಿಯುವ ಆನಂದ. ಒಂದು ಪ್ಯಾಕೆಟ್ ಚಿಕ್ಕಿಯನ್ನು ಕೊಂಡುಕೊಂಡು ಆಕೆಗೆ ಕಿಂಚಿತ್ ಸಹಾಯ ಮಾಡುವ ಆಲೋಚನೆ ನನಗೂ ಹೊಳೆಯಲಿಲ್ಲ. ಕಾರಣ ಕೊರೊನಾ ನೈರ್ಮಲ್ಯದ ಪೆಡಂಭೂತ. ಹೀಗೇ ಸುಮ್ಮನೆ ಹಣ ಕೊಟ್ಟುಹೋಗೋಣ ಅಂದರೆ ಆಕೆಯ ಮುಖದಲ್ಲಿ ಬಿತ್ತರಗೊಳ್ಳುವ ಸ್ವಾಭಿಮಾನದ ಚಿತ್ತಾರ ಕೆಣಕಬೇಡ ಅಂತ ನಮ್ಮನ್ನು ಎಚ್ಚರಿಸುತ್ತದೆ. ದಾನಶೂರ ಕರ್ಣನೆನಿಸಿಕೊಳ್ಳುವ ಹಪಹಪಿ ನನ್ನಲ್ಲೂ ಉಳಿದಿಲ್ಲ. ಅಲ್ಲದೆ ಕೊರಂದಿ ಅಮ್ಮ ಕೊರ್ಪಿ ಮುಂಡೆ ಎಂಬ ಪದವಿಗೆ ಪಾತ್ರನಾಗಿ ಸನ್ಮಾನಿತಗೊಂಡ ಸರ್ಟಿಫಿಕೇಟ್ ನನ್ನಲ್ಲಿ ಸಾಕಷ್ಟಿದೆ.

ಮಹಿಳಾ ದಿನಾಚರಣೆಯ ದಿನ ಆಕೆಯ ಪೂರ್ವಾಪರ ತಿಳಿದುಕೊಂಡು ಮುಂದಿನದನ್ನು ತೀರ್ಮಾನಿಸುವ ಯೋಚನೆ ನನ್ನೊಳಗೆ ಕಾವು ಕೊಡತೊಡಗಿತು. ಆ ದಿನ ಹತ್ತಿರ ಹತ್ತಿರ ಬರುತ್ತಾ ಇದೆ, ದಿನಾ ಅದೇ ದಾರಿಯಿಂದ ಹೋಗುತ್ತಲೂ ಇದ್ದೇನೆ. ಆದರೆ ಆಕೆಯೊಡನೆ ಮಾತಾಡುವ ಧೈರ್ಯ ಇಲ್ಲ. ಬಂದೇ ಬಿಟ್ಟಿತು ನೋಡಿ ಇಂಟರ್ ನ್ಯಾಶನಲ್ ವಿಮೆನ್ಸ್ ಡೇ. ಒಂದೊಂದೇ ಮೆಟ್ಟಿಲನ್ನು ಹಿಂದಕ್ಕೆ ತಳ್ಳುತ್ತಾ ಆಮೆಗಿಂತಲೂ ನಿಧಾನವಾಗಿ ಇಳಿಯುತ್ತಾ ಇದ್ದೆ. ಇವತ್ತೂ ಅಜ್ಜಿಗೆ ಏನೂ ಸಹಾಯ ಮಾಡಲಾಗಲಿಲ್ವಲ್ಲ ಅನ್ನೋ ಔದಾಸೀನ್ಯವೇ ನನ್ನ ಈ ಆಮೆ ಗತಿಗೆ ಕಾರಣ.

ಚಿಕ್‌ಚಿಕ್ಕ ಮಕ್ಕಳು ಅಲ್ಲೇ ಬಸ್‌ಸ್ಟ್ಯಾಂಡ್‌ನಲ್ಲಿ ದಾನಿಗಳ ಹುಡುಕಾಟದಲ್ಲಿ ಇರುವುದನ್ನು ಕಂಡೆ. ತಕ್ಷಣ ಶೂ ಶೂ ಅಂತ ಅವರನ್ನು ಹತ್ತಿರ ಕರೆದೆ. ಚಿಕ್ಕಿ ಖಾಯೆಗಾ? ಪ್ರಶ್ನೆಯನ್ನು ಪೂರ್ತಿಗೊಳಿಸೋ ಮೊದಲೇ ಒಬ್ಬ ಹುಡುಗ ಗಿರ್ಗಿಟ್ಲೆ ತರಹ ತಲೆ ಅಲ್ಲಾಡಿಸಿದ. ಅಜ್ಜೀ ಇವರಿಗೆ ಬೇಕಾದಷ್ಟು ಪ್ಯಾಕೆಟ್ ಕೊಡಿ ಅಂದೆ. ಮುಗಿ ಬಿದ್ದು ಅದು ಕೊಡಿ, ಇದು ಕೊಡಿ ಅಂತ ಎರಡ್ಮೂರು ಪ್ಯಾಕೆಟ್ ಎತ್ತಿಕೊಂಡವು. ಬೇರೆ ಪ್ಯಾಕೆಟ್ ನೋಡಿ ಅಂಕಲ್ ಇಸ್ಕ ಬದ್ಲಿಮೆ ಓ ಲೇಲೂ ಅಂತ ಕೇಳ್ದ. ಅದೂ ತಗೋ ಇದನ್ನೂ ಇಟ್ಕೋ ಅಂದೆ. ವಿಶ್ವಕಪ್ ಎತ್ತಿಕೊಂಡ ಟೀಮ್ ಇಂಡಿಯಾ ತರಹ ಕೇಕೇ ಹಾಕುತ್ತಾ ಓಡಿ ಹೋದವು

ಮಕ್ಕಳು. ನಾನು ಎಷ್ಟಾಯ್ತು ಅಜ್ಜಿ ಕೇಳಲು ತಿರುಗಿದೆ. ಅಷ್ಟರಲ್ಲೇ ವಾನರ ಸೇನೆ ತರಹ ಇನ್ನೊಂದಷ್ಟು ಮಕ್ಕಳು ಓಡೋಡಿ ಬರುವುದು ಕಾಣಿಸಿತು.

ಬಂದವರೇ ನನ್ನ ಅಣತಿಗೂ ಕಾಯದೆ ಅಲೆಗ್ಸಾಂಡರ್‌ನ ಆಕ್ರಮಣದಂತೆ ಕ್ಷಣಾರ್ಧದಲ್ಲಿ ಅಜ್ಜಿಯ ಬುಟ್ಟಿಯನ್ನು ಖಾಲಿ ಮಾಡಿ ಏನೂ ನಡೆದಿಲ್ಲ ಅನ್ನುವ ರೀತಿಯಲ್ಲಿ ತಮ್ಮ ತಮ್ಮ ಪಾಡಿಗೆ ಹೊರಟು ಹೋದವು. ಅಜ್ಜಿ ಪಾಪ ಗರಬಡಿದವರಂತೆ ಸುಮ್ಮನೆ ಪಿಳಿಪಿಳಿ ನೋಡ್ತಾ ಇತ್ತು. ಕಿತಿ ಧಲಿ ಅಜ್ಜೀ? ಕೇಳ್ದೆ. ಅತಾ ಕಾಯಿ ಸಾಂಗೂ ಅದೇ ಮಾತೂ, ಅದೇ ಪಿಳಿಪಿಳಿ ಕಣ್ಣು. ಐನೂರರ ಎರಡು ನೋಟು ಕೊಟ್ಟೆ. ಇತ್‌ನಾ?? ನಕೋ ಫಕ್ತ ಏಕಚ್ ದ್ಯಾ ಅಂತು ಪಾಪ. ತಗೊಳ್ಳಿ ಅಜ್ಜಿ ಅಂತ ನಾ ಮೆಚ್ಚಿದ ಲಂಕೇಶರ ಅವ್ವಾಳಿಗೇ ಕೊಡ್ತಾ ಇದೀನಿ ಅನ್ನೋ ರೀತಿಯಲ್ಲಿ ಎರಡೂ ನೋಟನ್ನು ಆಕೆಯ ಕೈಗಿತ್ತೆ. ಆಗಲೇ ಛಳಕ್ ಅಂತ ಆಕೆಯ ಕಣ್ಣಂಬ ಪೊಟರೆಯಿಂದ ಮರಕುಟಿಗ ಆಚೆ ಬಂದಂತೆ ಕಣ್ಣೀರು ಇಂಚಿಂಚು ಇಣುಕತೊಡಗಿತು. ಪಂಢರಾಪುರದ ವಿಠಲನ ಹೆಸರೆತ್ತಿ ಆಕೆ ಹರಸಿದ ರೀತಿ ಅಬ್ಬಾ ರೋಮಾಂಚನ.

ಅಂತೂ ಮಹಿಳಾ ದಿನಾಚರಣೆಯ ದಿನದಂದು ನನಗೆ ಡಬಲ್ ಧಮಾಕಾ ಒಂದು ನರಳಿ ನರಳಿ ಬದುಕುವ ಮಹಿಳೆಯರಿಗೆ ತಾಯಿಯ ಪಟ್ಟ ಕರುಣಿಸಿದ ಆ ಅನಾಥ ಬಾಲರ ಮೊಗದಲ್ಲಿ ಅರಳಿದ ನಗು. ಇನ್ನೊಂದು ಅಜ್ಜಿಯ ಆನಂದ ಭಾಷ್ಪ.

ಈಗಲೂ ಆ ಮೆಟ್ಟಿಲಿಳಿಯುತ್ತಾ ಕಣ್ಣಿಗೆ ಬೀಳುವ ಆ ಖಾಲಿ ಜಾಗ ಅನೇಕ ಕತೆಗಳನ್ನು ಹುಟ್ಟುಹಾಕುತ್ತಾ ಇರುತ್ತದೆ. ಅಜ್ಜಿಯನ್ನು ಒಮ್ಮೆ ನೋಡ್ಬೇಕು ಆಕೆಯ ಮಡಿಲಲ್ಲಿ ತಲೆ ಇಟ್ಟು ಮಲಗಬೇಕು. ಆಕೆ ನಿಮಗೆಲ್ಲಾದರೂ ನೋಡ ಸಿಕ್ಕರೆ ದಯಮಾಡಿ ಹೇಳಿ ನಾನು ಆಕೆಯ ದರುಶನಕ್ಕಾಗಿ ಕಾದಿರುವೆನೆಂದು.

ಒಂದಂತೂ ಸತ್ಯ ಅಜ್ಜಿ ಈಗ ಇಲ್ಲ.

**ಲೇಖಕರು :**

ಮುಂಬೈ ತುಳು ಕನ್ನಡ ರಂಗಭೂಮಿಯ ನಟರಾಗಿ ತನ್ನ ಪ್ರತಿಭೆಯಿಂದ ಪ್ರಖ್ಯಾತಿ ಪಡೆದಿರುವ ಶ್ರೀ ಮೋಹನ ಮಾರ್ನಾಡ್‌ರವರನ್ನು ಅನೇಕ ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿ ಪುರಸ್ಕಾರಗಳು ಅರಸಿಕೊಂಡು ಬಂದಿವೆ. ಮೋಹನ್ ಮಾರ್ನಾಡ್ ನಟನೆಯಲ್ಲಷ್ಟೇ ಅಲ್ಲ ಅನೇಕ ಕಲಾವಿದರಿಗೆ ಕಲಾ ತಂಡಗಳಿಗೆ ಪ್ರೋತ್ಸಾಹ ನೀಡುತ್ತಾ ಬರುತ್ತಿರುವುದು ಒಂದು ಮಾದರಿಯಾಗಿದೆ. ಬಹುಮುಖ ಪ್ರತಿಭೆಯ ಮೋಹನ್ ಬರಹಗಾರನಾಗಿ, ಕಥೆಗಾರನಾಗಿ, ನಿರ್ದೇಶಕನಾಗಿ ಉತ್ತಮ ಸಂಘಟಕನಾಗಿ ಸಮಾಜದ ಒಲವನ್ನು ಗಳಿಸಿದ್ದಾರೆ. ಜಾಹೀರಾತು ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಅವರ ಸಾಧನೆಯನ್ನು ಗುರುತಿಸಿ ನಮ್ಮ ಘನ ಸರಕಾರ ಈ ಬಾರಿಯ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರು ಮುಂಬಯಿ ಬಂಟರ ಸಂಘ ಮತ್ತು ಬಂಟ್ಸ್ ಅಸೋಸಿಯೇಷನ್‌ನ ಸಕ್ರಿಯ ಸದಸ್ಯ.

# Congratulations



**Jiya Shetty**




**Aanya Shetty**

Jiya Shetty, 14years old, is an 8th grader in Columbia, Missouri (USA). She has recently won the Missourian Regional Spelling Bee, qualifying her to compete in the Scripps National Spelling Bee this summer. Her younger sister Aanya Shetty, 10 years old, came in second place. The sisters spelled back and forth for several rounds before Jiya won. In additional of being phenomenal spellers, the sisters are state champions in Taekwondo. Jiya, who is a second degree black belt, has also earned many silver and bronze medals in national and world martial art tournaments. Not only that, both sisters have won many awards in math competitions and Chess tournaments. Jiya and Aanya are the daughters of Dr. Pavan Kumar Shetty and Chaitra Shetty, and are grand Children of our member K. Chikkayya Shetty & Jaya C. Shetty. Bunts Sangha Bangalore congratulates and wishes them all the best.

# ತೆಂಕುತಿಟ್ಟಿನ ಪುಂಡುವೇಷದ ಮೇಧಾವಿ–ಡಾ। ಶ್ರೀಧರ ಭಂಡಾರಿ ಬಳ್ಳಂಬೆಟ್ಟು



ಯಕ್ಷರಂಗದ ಸಿಡಿಲ ಮರಿ ಖ್ಯಾತಿಯ ಧರ್ಮಸ್ಥಳ ಮೇಳದ ಹಿರಿಯ ಕಲಾವಿದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ। ಶ್ರೀಧರ ಭಂಡಾರಿಯವರು ಕಳೆದ 19.02.2021ರಂದು ತಮ್ಮ 72ನೇ ವಯಸ್ಸಿನಲ್ಲಿ ನಿಧರಾಗಿರುವರು.



ಧರ್ಮಸ್ಥಳ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದು ಇವರ ಅಭಿಮನ್ಯು ಪಾತ್ರ ಭಾರಿ ಪ್ರಸಿದ್ಧಿ ಪಡೆದಿತ್ತು. ರಂಗಸ್ಥಳದಲ್ಲಿ ಚುರುಕಿನ, ವೇಗದ ನಡೆಯಿಂದ ಅವರಿಗೆ ಸಿಡಿಲ ಮರಿ ಎಂಬ ಬಿರುದು ಒಲಿದಿತ್ತು. ಒಮ್ಮೆಗೆ 200ರಿಂದ 250ರಷ್ಟು ಧೀಂಗಿಣ ಹಾಕುತ್ತಿದ್ದ ಶ್ರೀಧರ ಭಂಡಾರಿ ಅವರು ಬಭ್ರುವಾಹನ, ಅಶ್ವತ್ಥಾಮ, ಕುಶ, ಭಾರ್ಗವ ಮುಂತಾದ ಪಾತ್ರಗಳಲ್ಲಿ ಸೈ ಎನಿಸಿದ್ದರು. ಶ್ರೀಧರ ಭಂಡಾರಿಯವರು ತಮ್ಮ 62ನೇ ವಯಸ್ಸಿನಲ್ಲಿ ಖಾಸಗಿ ಸುದ್ದಿ ವಾಹಿನಿಯ ಶಭಾಸ್ ಇಂಡಿಯಾ ಕಾರ್ಯಕ್ರಮದಲ್ಲಿ ಭಾಗವಹಿಸಿ 39 ನಿಮಿಷಗಳಲ್ಲಿ 148 ಧೀಂಗಿಣಗಳನ್ನು ಹೊಡೆದು ದಾಖಲೆ ನಿರ್ಮಿಸಿದ್ದರು.

ಯಕ್ಷಗಾನ ಸೇವೆಗಾಗಿ ಪುತ್ತೂರು ಶ್ರೀಧರ ಭಂಡಾರಿಯವರಿಗೆ ಅಮೇರಿಕಾದ ಯುನಿವರ್ಸಿಟಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಈ ಗೌರವಕ್ಕೆ ವಿಶ್ವದಾದ್ಯಂತ ಆಯ್ಕೆಯಾದ ಕೇವಲ 35 ಜನರಲ್ಲಿ ಪುತ್ತೂರು ಶ್ರೀಧರ ಭಂಡಾರಿ ಓರ್ವರು. 1967ರಿಂದಲೇ ದುಬೈ, ಲಂಡನ್, ಜಪಾನ್, ಅಮೇರಿಕಾದಂತಹ ದೇಶಗಳಲ್ಲಿಯೂ ಯಕ್ಷಗಾನ ಪ್ರದರ್ಶನ ನೀಡಿದ ಹೆಮ್ಮೆ ಶ್ರೀಧರ ಭಂಡಾರಿಯವರದು.

"ಪುಂಡುವೇಷ" ಎಂಬುದು ಯಕ್ಷಗಾನದ ಪರಿಭಾಷೆಯಲ್ಲಿ ಯುವ ವೀರನ ವೇಷವೆಂದು ಅರ್ಥ. ತೆಂಕುತಿಟ್ಟಿನ ಪುಂಡು ವೇಷಗಳ ಒಂದು ತಾರಾ ಪಥವೇ ಇತ್ತು. ಅಳಕೆ ರಾಮಯ್ಯ ರೈ, ಮೂಡುಬಿದಿರೆ ಕಿಟ್ಟು, ಕೋಳ್ಯಾರು ರಾಮಚಂದ್ರ ರಾವ್, ಕ್ರಿಶ್ಚನ್ ಬಾಬು, ಹೊಸಹಿತ್ತಿಲು ಮಹಾಲಿಂಗ ಭಟ್ಟ, ಕೆ. ಗೋವಿಂದ ಭಟ್ಟ, ಅರುಗ ಕೊರಗಪ್ಪ ಶೆಟ್ಟಿ, ಪಡ್ರೆ ಚಂದು, ಮಧೂರ್ ವೆಂಕಟರಮಣ ರಾವ್, ಕುಂಬಳೆ ಸುಂದರ್ ರಾವ್, ಈ ಗಣ್ಯ ಸಾಲನ್ನು ಅಲಂಕರಿಸಿದವರು ಶ್ರೀಯುತ ಶ್ರೀಧರ ಭಂಡಾರಿಯವರು.

ಪುಂಡು ವೇಷದ ಯಶಸ್ವಿ ಮಾನದಂಡ ಆತ ಕೃಷ್ಣನ ಪಾತ್ರದಲ್ಲಿ ಹೇಗೆ ಎಂಬುದು. ರೂಪ, ಗಾತ್ರ, ಚಲನೆಯ ಚೆಲುವು, ಚುರುಕುತನ ಮತ್ತು ಎಲ್ಲಕ್ಕಿಂತ ತತ್ವ ದರ್ಶನವನ್ನು ಪಾತ್ರಾಭಿನಯದಲ್ಲಿ ಅವಶ್ಯಕತೆಗೆ ಸರಿಯಾಗಿ ತರುವ ಯೋಗ್ಯತೆ ಇವುಗಳಿಂದ ಕೃಷ್ಣನ ಪಾತ್ರ ಕಳೆಗಟ್ಟಬೇಕು. ಭಂಡಾರಿ ಅವರ ರೂಪವೇ ಕೃಷ್ಣನಿಗೆ ಲಯವಾಗಿ ಒಪ್ಪುವಂಥದ್ದು. ಕೃಷ್ಣನಿಗೆ ಬೇಕಾದ ಮಧುರವಾದ ಮತ್ತು ಪ್ರಭಾವಿಯಾದ ಕಂಠಗುಣ ಅವರಲ್ಲಿತ್ತು. ಶ್ರೀಧರ ಭಂಡಾರಿ ಪುಂಡು ವೇಷದಲ್ಲಿ ತೆರವುಗೊಳಿಸಿದ ಸ್ಥಾನ ಭರ್ತಿಯಾಗಲು ಇನ್ನಷ್ಟು ಕಾಲ ಬೇಕೆನಿಸುತ್ತದೆ. ಆದರೂ ಅವರು ತನ್ನ ಬಳಿಕದ ಯಶಸ್ವಿಗಳೆಂದು ಕೆಲವರನ್ನು ಹೆಸರಿಸಿದ್ದಾರೆ. ಅವರ ಒಳ್ಳೆಯತನ ಅದು. ಹೊಸನಗರದಲ್ಲಿ ರಾಮಚಂದ್ರಪುರ ಮಠದ ವ್ಯವಸ್ಥಾಪನದಲ್ಲಿ ಉತ್ತರ ಕನ್ನಡದ ಪ್ರಸಿದ್ಧ ಎರಡು ತಂಡಗಳ ಆಟದ ಪ್ರದರ್ಶನಗಳಾದ ಪುತ್ತಿಗೆ ರಘುರಾಮ ಹೊಳ್ಳರ ಭಾಗವತಿಕೆಯಲ್ಲಿ ತೆಂಕು ತಿಟ್ಟಿನ ಕೃಷ್ಣ ಪಾರಿಜಾತ ಪ್ರಸಂಗ. ಇದು ಹೇಗೋ ಕೈಬಿಟ್ಟಿತೆಂದು ನೋಡುವವರೆಗಿನ ಗ್ರಹಿಕೆ. ಆದರೇನು? ಶ್ರೀಧರ ಭಂಡಾರಿಯವರ ಕೃಷ್ಣ, ಅಂಬಾಪ್ರಸಾದ ಪಾತಾಳ ಅವರ ಸತ್ಯಭಾಮೆಯರ ಪಾತ್ರಾಭಿನಯದ

ಶೃಂಗಾರ ರಸದೋಕುಳಿಯೊಂದಿಗೆ ನಟ್ಟಿರುಳಿನ ವೇಳೆಗಾದ ಆ ಆಟ ಆವರೆಗಿನ ಎಲ್ಲವನ್ನೂ ಮರೆಯುವಂತೆ ಮಾಡಿತ್ತು.

ಅಂದು ಅವರು ಯಕ್ಷಗಾನದ ನಟಸಾರ್ವಭೌಮ ಕುರಿಯ ವಿಠಲ ಶಾಸ್ತ್ರಿ ಅವರ ನಿಷ್ಠ ಶಿಷ್ಯನಾಗಿದ್ದುದು ಸಾರ್ಥಕವಾಗಿತ್ತು. ವಿಠಲ ಶಾಸ್ತ್ರಿಗಳಿಂದಲ್ಲದೆ ಹೊಸಹಿತ್ತಿಲು ಮಹಾಲಿಂಗ ಭಟ್ಟರು, ಮೂಡಬಿದಿರೆ ಮಾಧವ ಶೆಟ್ಟಿ ಇವರಿಂದ ಯಕ್ಷಗಾನ ನಾಟ್ಯಾಭ್ಯಾಸವನ್ನೂ ನಾಟ್ಯಾಚಾರ್ಯ ಕುದ್ಕಾಡಿ ವಿಶ್ವನಾಥ ರೈ ಅವರಿಂದ ಭರತನಾಟ್ಯವನ್ನೂ ಕಲಿತು ತನ್ನ ನೃತ್ಯ ಯೋಗ್ಯತೆಯನ್ನು ಹೆಚ್ಚಿಸಿಕೊಂಡು ಕಡತೋಕಾ ಮಂಜುನಾಥ ಭಾಗವತರ ಕಲ್ಪನೆಯ ಅಭಿನಯ ತತ್ತ್ವದಲ್ಲಿ ಪಾತ್ರವನ್ನು ಜೀವಂತಗೊಳಿಸಿದವರು ಶ್ರೀಯುತ ಶ್ರೀಧರ ಭಂಡಾರಿಯವರು.

ಶ್ರೀಧರ ಭಂಡಾರಿಯವರ ಖ್ಯಾತಿ ಅಭಿಮನ್ಯುವಿನ ಪಾತ್ರಾಭಿನಯದಲ್ಲಿ ಅವರ ಧೀಂಗಿಣದ ಬಿರುಸು, ಪ್ರತಾಪ, ತಾಯಿಯೊಂದಿಗಿನ ಭಾವತುಮುಲ ಮತ್ತು ವೀರಾವೇಶದ ಯುದ್ಧ ಇತ್ಯಾದಿ ಬಹುಶಃ ಕ್ರಿಶ್ಚನ್ ಬಾಬು ಅವರಷ್ಟೆ ಚೇತೋಹಾರಿಯಾದುದು. ಈ ವೀರರಸದ ಪಂಥಾಹ್ವಾನದಲ್ಲಿ ಅವರಿಗೆ ಒಮ್ಮೆ ಕರುಳಿನ ಮಗುಚು ಕಾಟಕೊಟ್ಟಿತು. ಅದರಿಂದ ಚೇತರಿಸಿಕೊಂಡು ಬಹುಕಾಲ ಯಕ್ಷಗಾನ ರಂಗದಲ್ಲಿ ಸೇವೆ ಸಲ್ಲಿಸಿದರು. ಆದರೆ ಧೀಂಗಿಣದಿಂದಲೇ ಇದಿರಾದ ಮಂಡಿನೋವು ಅವರಿಗೆ ನಿವೃತ್ತಿಯನ್ನು ಕಡ್ಡಾಯ ಮಾಡಿತು.


ಧರ್ಮಸ್ಥಳ ಮೇಳದಿಂದ ನಿವೃತ್ತಿಯಾಗಿ ಇವರು ಪುತ್ತೂರು ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯನ್ನು ಸ್ಥಾಪಿಸಿ ಪ್ರಸಿದ್ಧ ಯಕ್ಷಗಾನ ವೇಷಧಾರಿಗಳ ತಂಡದೊಂದಿಗೆ ಮೈಸೂರು, ಬೆಂಗಳೂರು, ಮುಂಬೈ, ಪೂನಾ ಹಾಗೂ ಇತರ ಪ್ರದೇಶಗಳಲ್ಲಿ ಯಕ್ಷಗಾನ ಪ್ರದರ್ಶಿಸಿದ್ದರು. ಇವರ ಯಕ್ಷಗಾನ ಪ್ರತಿಭೆಯನ್ನು ಗುರುತಿಸಿ ಜೊತೆಗೆ ಶಿವರಾಮ ಕಾರಂತ ಪ್ರಶಸ್ತಿ ಹಾಗೂ ಶ್ರೀಯುತ ಪೇಜಾವರ ಶ್ರೀಗಳಿಂದ, ಮುಂಬೈ ಬಂಟರ ಸಂಘ ಹಾಗೂ ಧರ್ಮಸ್ಥಳ ಡಾ. ಡಿ. ವಿರೇಂದ್ರ ಹೆಗ್ಗಡೆಯವರಿಂದಲೂ ಗೌರವ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಮೃತರು ಪತ್ನಿ ಉಷಾ ಭಂಡಾರಿ, ಪುತ್ರಿಯರಾದ ಕೋಕಿಲ, ಶಾಂತಲಾ, ಅನಿಲ ಹಾಗೂ ಪುತ್ರ ದೇವಿ ಪ್ರಕಾಶರನ್ನು ಅಗಲಿದ್ದಾರೆ.

ಓರ್ವ ಹೆಸರಾಂತ, ವಿನಯಶೀಲ ಯಕ್ಷಗಾನದ ಪ್ರತಿಭಾವಂತ ಕಲಾವಿದನನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀಯುತ ಶ್ರೀಧರ ಭಂಡಾರಿಯಂತ ಪ್ರತಿಭಾವಂತ ಯಕ್ಷಗಾನ ಕಲಾವಿದರು ಮುಂದೆ ಹುಟ್ಟಿ ಬರಲಿ ಎಂದು ಆಶಿಸುತ್ತಾ, ಇವರಿಗೆ ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

**ವರದಿ: ಸತ್ಯಾನಂದ ಮೇಲಾಂಟ**

# ಡಾ|| ಬಿ.ಎಂ. ಹೆಗ್ಡೆಯವರಿಗೆ "ಪದ್ಮವಿಭೂಷಣ" ಪ್ರಶಸ್ತಿ



ಸ್ನೇಹಚಿಂತನೆ ಮಾರ್ಚ್ 2021ರ ಸಂಚಿಕೆ, ಪುಟ 17ರಲ್ಲಿ ಡಾ| ಬಿ.ಎಂ. ಹೆಗ್ಡೆಯವರಿಗೆ ಪದ್ಮಭೂಷಣ ಪ್ರಶಸ್ತಿ ಲಭಿಸಿದೆ ಎಂದು ತಪ್ಪಾಗಿ ಮುದ್ರಿಸಲಾಗಿತ್ತು. ಶ್ರೀಯುತರಿಗೆ ಲಭಿಸಿದ್ದು **"ಪದ್ಮವಿಭೂಷಣ"** ದೇಶದ ಎರಡನೇ ಅತ್ಯುನ್ನತ ಪ್ರಶಸ್ತಿ. ಆದ ತಪ್ಪಿಗೆ ಕ್ಷಮೆ ಕೋರುತ್ತಾ ವಿಷಾದ ವ್ಯಕ್ತ ಪಡಿಸುತ್ತಿದ್ದೇವೆ. ಹಾಗೆಯೇ ಪದ್ಮವಿಭೂಷಣ ಡಾ| ಬಿ.ಎಂ. ಹೆಗ್ಡೆಯವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಅಭಿನಂದನೆಗಳು.

**– ಸಂಪಾದಕ ಮಂಡಳಿ**

# ಆಧುನಿಕತೆಯ ನಂಟು ಅಪಾಯದ ಗಂಟು



**ಪ್ರದೀಪ ಶೆಟ್ಟಿ**
**ಬೇಳೂರು**

ನಮಸ್ತೆ ಮಿತ್ರರೇ. ಈ ಭೂಮಿಯ ಗರ್ಭದಲ್ಲಿ ಸಹಸ್ರಾರು ಜೀವಿಗಳು ಸೃಷ್ಟಿಯಾಗಿವೆ. ಹಾಗೇ ಮುಂದೆಯೂ ಸೃಷ್ಟಿಯಾಗುತ್ತಲೇ ಇರುತ್ತವೆ. ಇಷ್ಟು ಸಹಸ್ರಾರು ಜೀವ ಕಣದಲ್ಲಿ ಮನುಷ್ಯ ಎಲ್ಲ ಜೀವಿಗಳಿಗಿಂತ ವಿಭಿನ್ನವಾಗಿರುವ ಪ್ರಭೇದ. ಯಾವ ಜೀವ ಕಣಗಳಿಗೂ ಇರದಂತಹ ಬುದ್ಧಿ ಶಕ್ತಿ ಮನುಷ್ಯನಿಗಿದೆ. ಹಾಗಾಗಿ ಮನುಷ್ಯ ಪ್ರತಿ ಘಳಿಗೆ ಈ ಜಗತ್ತಿನಲ್ಲಿ ಒಂದಲ್ಲ ಒಂದು ಆವಿಷ್ಕಾರದಲ್ಲಿ ತೊಡಗುತ್ತಾನೆ. ಈ ಭೂಮಿಯ ಮೇಲೆ ಮನುಷ್ಯನ ಇರುವಿಕೆಯು ಎಷ್ಟೋ ಸಾವಿರ ವರ್ಷಗಳಿಂದ ಇದೆ. ಆದರೆ ವೈಜ್ಞಾನಿಕ ಆವಿಷ್ಕಾರಗಳು ಇತ್ತೀಚಿನ ಕೆಲವು ಶತಮಾನಗಳಿಂದ ಅತಿ ವೇಗದಲ್ಲಿ ನಡೆಯುತ್ತಿದೆ. ಇಂದಿನ ಪ್ರಸ್ತುತ ಕಾಲಘಟ್ಟದಲ್ಲಿ ನಿಂತು ಒಮ್ಮೆ ಕೇವಲ ಒಂದು ಶತಮಾನದ ಹಿಂದೆ ನಮ್ಮ ಹಿರಿಯರು ಬದುಕಿದ ರೀತಿಯನ್ನು ಅವಲೋಕಿಸಿದರೆ ಇಂದು ನಮ್ಮೆದುರಿಗೆ ಕಾಣುವ ಬಹು ವೈಜ್ಞಾನಿಕ ಆವಿಷ್ಕಾರಗಳು ಅಂದಿನ ಕಾಲಘಟ್ಟದಲ್ಲಿ ಇರಲೇ ಇಲ್ಲ. ಹಾಗಾಗಿ ಮನುಷ್ಯನ ಬದುಕು ಕೂಡ ಅಂದು ಬೇರೆಯೇ ಹಾದಿಯಲ್ಲಿ ಸಾಗುತ್ತಿತ್ತು. ಆದರೆ ಇಂದು ಆವಿಷ್ಕಾರಗಳು ದಿನಕ್ಕೊಂದರಂತೆ ಆಗುತ್ತಿರುವುದರಿಂದ ಮನುಷ್ಯನ ಬದುಕು ಕೂಡ ಬೇರೆ ಬೇರೆ ಪಥದಲ್ಲಿ ಸಾಗುತ್ತಿದೆ. ಆಧುನಿಕ ಅನ್ವೇಷಣೆ ಮಹತ್ವವಾದದ್ದು ಹೌದು ಆದರೆ ಆ ಅನ್ವೇಷಣೆಯ ಭರದಲ್ಲಿ ನಮ್ಮ ನಾಶವೂ ಕೂಡ ಅಷ್ಟೇ ವೇಗವಾಗಿ ನಡೆಯುತ್ತಿದೆ. ಆಹಾರ ಪದ್ಧತಿಯಿಂದ ಹಿಡಿದು ಸಂಪರ್ಕ ಸಾಧನದವರೆಗೂ ಎಲ್ಲಾ ಕ್ಷೇತ್ರಗಳಲ್ಲೂ ಅಂದಿನ ಕಾಲಘಟ್ಟಕ್ಕೂ ಇಂದಿನ ಪ್ರಸ್ತುತ ದಿನಮಾನಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಒಂದಿಷ್ಟು ದಶಕಗಳ ಹಿಂದೆ ಹೋದರೆ ನಮ್ಮ ದೇಶದಲ್ಲಿ ಪಟ್ಟಣಗಳು ಇಂದು ಬೆಳೆದಿರುವ ಹಾಗೆ ಬೆಳೆದಿರಲಿಲ್ಲ. ಜನರು ಕೂಡ ಹಳ್ಳಿಗಳಲ್ಲಿ ಶಾಶ್ವತವಾಗಿ ನೆಲೆಯೂರಿದ್ದರು ಮತ್ತು ವ್ಯವಸಾಯ ಪ್ರಮುಖ ಉದ್ಯೋಗವಾಗಿತ್ತು. ಅಂದು ಉಪಯೋಗಿಸುತ್ತಿದ್ದ ಆಹಾರಗಳು ಇಂದಿನಷ್ಟು ವಿಷಪೂರಿತವೂ ಆಗಿರಲಿಲ್ಲ. ಹಾಗಾಗಿ ನಮ್ಮ ಹಿರಿಯರ ಆರೋಗ್ಯ ಇಂದಿನ ಯುವಪೀಳಿಗೆಯ ಜನರ ಆರೋಗ್ಯದ ಹಾಗೆ ಬೇಗ ಹದಗೆಡುತ್ತಿರಲಿಲ್ಲ.

ಅಂದು ಒಂದು ಊರಿನಿಂದ ಮತ್ತೊಂದು ಊರಿಗೆ ಸಂಪರ್ಕಿಸಲು ವಾಹನಗಳು ಅಥವಾ ದೂರವಾಣಿ ಸಂಪರ್ಕ ಇಂದಿನಷ್ಟು ಸಲೀಸಾಗಿ ಇರಲೇ ಇಲ್ಲ ಹಾಗಾಗಿ ದೇಶದ ಬಹುಪಾಲು ಜನರು ಎತ್ತಿನಗಾಡಿಯೋ ಅಥವಾ ಕಾಲ್ನಡಿಗೆಯಲ್ಲಿ ಪ್ರಯಾಣಿಸುವುದು ಮತ್ತು ಕಾಗದ ಪತ್ರಗಳ ಮೂಲಕ ಸಂಪರ್ಕ ಸಾಧಿಸುವುದು ಸರ್ವೇ ಸಾಮಾನ್ಯವಾಗಿತ್ತು. ಆದರೆ ಇಂದು ಪ್ರತಿ ಮನೆಯಲ್ಲೂ ಸರಾಸರಿ ಎರಡು ಮೂರು ವಾಹನಗಳು ಮತ್ತು ಹತ್ತಾರು ಮೊಬೈಲುಗಳು ಕಂಡು ಬರುತ್ತವೆ. ಅಂದು ನಮ್ಮ ಹಿರಿಯರಿಗೆ ಪ್ರಪಂಚದ ಆಗು ಹೋಗುಗಳನ್ನು ಅರಿಯುವುದು ಕಷ್ಟವೇ ಆಗಿತ್ತು. ಹೌದು, ಆದರೆ ಇಂದಿನ ಆಧುನಿಕತೆಯ ಸೋಗಿನಲ್ಲಿ ಯುವ ಜನಾಂಗ ಪ್ರಪಂಚದ ಆಗುಹೋಗುಗಳನ್ನು ಅರಿಯುವುದಕ್ಕಿಂತ ಜಾಸ್ತಿ ನಕಾರಾತ್ಮಕ ವಿಷಯಗಳನ್ನೇ ಜಾಸ್ತಿ ತಿಳಿದುಕೊಳ್ಳುವರು. ದಶಕಗಳ ಹಿಂದೆ ಹತ್ತಾರು ಮೈಲಿ ನಡಿಗೆ ಮಾಡುವ ಶಕ್ತಿಯಿದ್ದ ಮನುಷ್ಯ ಇಂದು ಪ್ರತಿ ಹೆಜ್ಜೆಗೂ ಆಧುನಿಕ

ಉಪಕರಣಗಳ ಮೇಲೆ ಅವಲಂಬಿತನಾಗಿದ್ದಾನೆ. ಒಂದು ಕಾಲದಲ್ಲಿ ಅಡಿಗೆ ಮನೆಯು ಕಲ್ಲಿನ ಮತ್ತು ಮಣ್ಣಿನ ಉಪಕರಣಗಳಿಂದ ತುಂಬಿತ್ತು. ಆಗ ಮನುಷ್ಯನ ಶ್ರಮವೂ ಕೂಡ ಅಷ್ಟೇ ಬೇಕಿತ್ತು ಅಡುಗೆ ಮಾಡುವುದಕ್ಕೆ. ಆದರೆ ಇಂದು ಅಡಿಗೆ ಮನೆಯಲ್ಲಿ ಯಾಂತ್ರಿಕ ಉಪಕರಣಗಳು ಹೆಚ್ಚಾಗಿವೆ. ಇದು ಮನುಷ್ಯನ ದೈಹಿಕ ಶ್ರಮವನ್ನು ಮೊಟಕುಗೊಳಿಸಿದೆ. ಈ ಆಧುನಿಕತೆ ಎಷ್ಟು ಒಳಿತೋ ಅಷ್ಟೇ ಕೆಡುಕೂ ಹೌದು. ಆದರೆ ಅದರ ಪರಿಣಾಮ ಗೊತ್ತಾಗುವುದಕ್ಕೆ ಒಂದಿಷ್ಟು ಸಮಯ ಹಿಡಿಯಬಹುದಷ್ಟೇ. ಅಂದು ಪ್ರಯಾಣಕ್ಕೆ ಒಂದು ವಾಹನವಿದ್ದರೆ ಹೆಚ್ಚು. ಆದರೆ ಇಂದು ಊರೆಲ್ಲಾ ವಾಹನಗಳು, ದಿನನಿತ್ಯ ಸಾವಿರಾರು ಜನ ವಾಹನಗಳ ಅಪಘಾತದಲ್ಲಿ ಬದುಕನ್ನೇ ಕೊನೆಗೊಳಿಸುತ್ತಿದ್ದಾರೆ. ಇದು ಆಧುನಿಕತೆ ಮನುಷ್ಯನ ಬದುಕಿಗೆ ನೀಡುತ್ತಿರುವ ಕೊಡುಗೆ. ಮನುಷ್ಯನಿಗೆ ಮತ್ತೊಬ್ಬ ಮನುಷ್ಯನ ಮೇಲೆ ಇರುವ ಪ್ರೀತಿ ಕಾಳಜಿಗಿಂತ ಈ ಯಾಂತ್ರಿಕ ಉಪಕರಣಗಳ ಮೇಲೆ ಇಂದು ವ್ಯಾಮೋಹ ಅತಿಯಾಗಿದೆ. ಇದು ಮುಂದಿನ ಪೀಳಿಗೆಗೆ ಪ್ರಸ್ತುತ ಕಾಲಘಟ್ಟ ನೀಡುತ್ತಿರುವ ತಪ್ಪು ಸಂದೇಶ. ಹೊಸತನ ಸೆಳೆತಕ್ಕೆ ಪೂರಕ ಆಗಿರಬೇಕು, ಆದರೆ ಹಳೆ ಪದ್ಧತಿಯನ್ನು ಅಳಿಸಿ ಹಾಕುವ ಹಂತಕ್ಕೆ ಇಂದು ನಾವು ತಲುಪಿಯಾಗಿದೆ. ಆಧುನಿಕತೆಯ ಅನುಕೂಲ ಪಡೆಯೋಣ ಆದರೆ ಅದರ ಗುಂಗಿನಲ್ಲಿ ಮುಂದಿನ ಜನಾಂಗಕ್ಕೆ ಹಳೆಯ ಸಂಪ್ರದಾಯ, ಪದ್ಧತಿಗಳನ್ನು ವರ್ಗಾಯಿಸುವ ಕಾರ್ಯವನ್ನು ಮರೆಯದಿರೋಣ. ಆಗದೆ ಹೋದಲ್ಲಿ ಮುಂದೊಂದು ದಿನ ಅದರ ಪರಿಣಾಮ ಅನುಭವಿಸುವುದಕ್ಕೆ ಅಣಿಯಾಗೋಣ.

## ಅಭಿನಂದನೆಗಳು

## ಸ್ವಾತಂತ್ರ್ಯೋತ್ಸವ 2018ನೇ ಸಾಲಿನ ರಾಷ್ಟ್ರಪತಿ ಪದಕ ಪ್ರದಾನ




**ಶ್ರೀ ಸುಧೀರ್ ಎಸ್. ಶೆಟ್ಟಿ**
**ಪೊಲೀಸ್ ಉಪಾಧೀಕ್ಷಕರು**

ಮೂಲತಃ ಉಡುಪಿ ಜಿಲ್ಲೆಯವರಾದ ಇವರು 1999ರ ಬ್ಯಾಚ್‌ನ ಪಿ.ಎಸ್.ಐ ಆಗಿ ನೇಮಕಗೊಂಡು ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿ 2007ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಬಡ್ತಿ ಹೊಂದಿ ಇದೀಗ 2019ರಲ್ಲಿ ಪೊಲೀಸ್ ಉಪಾಧೀಕ್ಷಕರಾಗಿ (Dy.SP) ಬಡ್ತಿ ಹೊಂದಿರುತ್ತಾರೆ.

ಇವರ ಸೇವಾ ಅವಧಿಯ ಅಸಾಧಾರಣ ಸೇವೆಯನ್ನು ಪರಿಗಣಿಸಿ ಪೊಲೀಸ್ ಇಲಾಖೆಯ ಪ್ರಶಂಸನೀಯ ಬಹುಮಾನಗಳು, ಪ್ರಶಸ್ತಿಗಳು ಬಂದಿರುತ್ತದೆ. ಹಾಗೂ ಹಲವಾರು ಎನ್.ಜಿ.ಓಗಳು, ರಾಜ್ಯ ಗೃಹ ಇಲಾಖೆಯು ಇವರನ್ನು ಗೌರವಿಸಿ ಪುರಸ್ಕರಿಸಿರುತ್ತದೆ. 2007ರಲ್ಲಿ **ಮುಖ್ಯಮಂತ್ರಿ ಪದಕ** ಲಭಿಸಿದ್ದು, ಇದೀಗ ಇವರ ಶ್ಲಾಘನೀಯ ಸೇವೆಯನ್ನು ಗುರುತಿಸಿ ಭಾರತ ಸರಕಾರವು ನೀಡುವ 2018ನೇ ಸಾಲಿನ ಸ್ವಾತಂತ್ರ್ಯೋತ್ಸವ ಭಾರತದ **ರಾಷ್ಟ್ರಪತಿ ಪದಕಕ್ಕೆ** ಭಾಜನರಾಗಿರುತ್ತಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಅಪ್ರತಿಮ ಕ್ರೀಡಾಪಟು – ಬೊಮ್ಮರಬೆಟ್ಟು ಬಾಬು ಶೆಟ್ಟಿ



**ಬಾಬು ಶೆಟ್ಟಿ**
ಕ್ರೀಡಾಪಟು

ಪ್ರತಿಯೊಂದು ನಾಡವ ಕುಟುಂಬದಲ್ಲಿ ಒಬ್ಬ ಅಥವಾ ಒಬ್ಬಳು ಅಥವಾ ಅದಕ್ಕೂ ಹೆಚ್ಚು ಮಂದಿ ಕ್ರೀಡಾ ಪಟುಗಳಿರುವುದನ್ನು ಕಾಣ–ಬಹುದಾಗಿದೆ. ಕೆಲವೊಂದು ಕ್ರೀಡಾಪಟು ಕುಟುಂಬಗಳೇ ಇರುತ್ತವೆ. ಅವರಲ್ಲಿ ಹೆಚ್ಚಿನವರು ಯಾವುದಾದರೊಂದು ಕ್ರೀಡಾ ಸ್ಪರ್ಧೆಯಲ್ಲಿ ಪಾರಮ್ಯ ಗಳಿಸಿದವರೇ ಇರುತ್ತಾರೆ. ಭಾರತ ತಂಡದಲ್ಲಿ ಟೆಸ್ಟ್ ಮ್ಯಾಚ್ ಆಡಿದ ಶ್ರೀ ಬಿ. ಸಿ. ಆಳ್ವರಿಂದ ಹಿಡಿದು, ಅಂತರಾಷ್ಟ್ರೀಯ ಟೇಬಲ್ ಟೆನಿಸ್ ಆಟಗಾರ ಸನಿಲ್ ಶೆಟ್ಟಿ, ಈ ವರ್ಷ ಅರ್ಜುನ ಪಶಸ್ತಿಗೆ ಭಾಜನರಾದ ಬ್ಯಾಡ್ಮಿಂಟನ್ ಆಟಗಾರ ಚಿರಾಗ್ ಶೆಟ್ಟಿಯವರೆಗೆ ಬಹಳಷ್ಟು ಬಂಟ ಕ್ರೀಡಾಪಟುಗಳು ವಿಭಿನ್ನ ಕ್ರೀಡೆಗಳಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಹಲವಾರು ವೈಟ್ ಲಿಫ್ಟರ್‌ಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ್ದರು. ಕೇವಲ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಸಾಧನೆ ಮಾಡಿದವರನ್ನು ಹೆಸರಿಸುವುದಾದರೆ ಮಂಗಳೂರಿನ ಕೆ. ಶ್ರೀಧರ ಆಳ್ವ ಒಬ್ಬ ಬಹುಮುಖ ಪ್ರತಿಭಾವಂತ ಕ್ರೀಡಾಳುವಾಗಿದ್ದು ಅರವತ್ತರ ದಶಕದಲ್ಲಿ ಹಲವಾರು ಏಷಿಯನ್ ಕ್ರೀಡಾಕೂಟದಲ್ಲಿ ಡೆಕಾತ್ಲನ್ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ ಗೆದ್ದವರಾಗಿದ್ದಾರೆ. ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಹತ್ತು ಬಾರಿ ಡೆಕಾತ್ಲನ್ ಸ್ಪರ್ಧೆಯಲ್ಲಿ ಚಿನ್ನ, ನಾಲ್ಕು ಬಾರಿ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಚಿನ್ನ, ಮೂರು ಬಾರಿ 110 ಮೀಟರ್ ಹರ್ಡಲ್ಸ್ ಓಟದಲ್ಲಿ ಚಿನ್ನ ಈ ರೀತಿ ರಾಷ್ಟ್ರೀಯ ಸ್ಪರ್ಧೆಗಳಲ್ಲಿ 17 ಚಿನ್ನದ ಪದಕ ಗೆದ್ದಿರುವ ಬಾಬು ಶೆಟ್ಟಿ ಇನ್ನೊಬ್ಬ ಅಪ್ರತಿಮ ಕ್ರೀಡಾಪಟು.

ಓಟ, ಜಿಗಿತ, ಎಸೆತದ ಕ್ರೀಡಾ ಸ್ಪರ್ಧೆಗಳಲ್ಲಿ ಆಸಕ್ತಿ ಹೊಂದಿದ್ದರು. ನಮ್ಮ ಜಿಲ್ಲೆಯಲ್ಲಿ ಆ ಕಾಲದಲ್ಲಿ ಅಥ್ಲೆಟಿಕ್ಸ್ ಸ್ಟೇಡಿಯಂಗಳಿರಲಿಲ್ಲ. ಸಿಂಡರ್ ಯಾ ಟಾರ್ಟನ್ ಟ್ರ್ಯಾಕ್ ಕೂಡ ಇರಲಿಲ್ಲ. ಕ್ರೀಡಾಳುವಿಗೆ ಅವಶ್ಯವಾದ ಸ್ಪೈಕುಗಳೂ ಹೆಚ್ಚಿನ ಓಟಗಾರರಿಗೆ ಅಲಭ್ಯವಿದ್ದವು. ಬೈಲೂರಿನಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಬಾಬು ಶೆಟ್ಟಿ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ತಾಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಗೆದ್ದು ಶಾಲಾ ಬಾಲಕರ ರಾಜ್ಯ ಕ್ರೀಡಾಕೂಟದಲ್ಲಿ ಕೂಡಾ ಲಾಂಗ್ ಜಂಪಿನಲ್ಲಿ ಸ್ವರ್ಣಪದಕ ಗಳಿಸಿದ್ದರು. 1979ರಲ್ಲಿ ಮೊದಲ ಪ್ರಯತ್ನದಲ್ಲೇ ರಾಷ್ಟ್ರೀಯ ಶಾಲಾ ಬಾಲಕರ ದೂರ ಜಿಗಿತದ ಸ್ಪರ್ಧೆಯಲ್ಲಿ ಪ್ರಥಮರಾಗಿ ಸ್ವರ್ಣ ಪದಕ ಗಳಿಸಿದರಲ್ಲದೆ, ರಾಷ್ಟ್ರೀಯ ದಾಖಲೆಯನ್ನು ಕೂಡ ಮುರಿದರು. ಇವರ ಸಾಧನೆಯನ್ನು ಗಮನಿಸಿದ ರೈಲ್ವೇ ತಂಡದ ಕ್ರೀಡಾಧಿಕಾರಿಗಳು ಇವರಿಗೆ ನೌಕರಿ ಒದಗಿಸಿ ಕೊಟ್ಟು ತಮ್ಮ ಕ್ರೀಡಾ ತಂಡದ ಸದಸ್ಯನಾಗಿ ಸೇರಿಸಿಕೊಂಡರು.

ಬಾಬು ಶೆಟ್ಟಿ ಒಬ್ಬ ಶ್ರಮಜೀವಿ, ಕ್ರೀಡಾ ತಂತ್ರಗಳಲ್ಲಿ ಪರಿಣತಿ ಪಡೆಯಲು ಸತತ ಕಠಿಣ ಅಭ್ಯಾಸ ಮಾಡುತ್ತಾ ಶೀಘ್ರದಲ್ಲೇ ರಾಷ್ಟ್ರ ಮಟ್ಟದ ಕ್ರೀಡಾಪಟುವಾಗಿ ಗುರುತಿಸಲ್ಪಟ್ಟರು. ಹರ್ಡಲ್ಸ್ ಓಟ, ಜಿಗಿತ ಮತ್ತು ಎಸೆತವೆಲ್ಲವುಗಳಲ್ಲಿ ಪರಿಣತಿ ಹೊಂದಿದ್ದ ಕಾರಣ, ತರಬೇತುದಾರರ ಸಲಹೆಯ ಮೇರೆಗೆ ಡೆಕಾತ್ಲನ್ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರಾರಂಭಿಸಿದ ಅವರು ಕೆಲವೇ ವರ್ಷಗಳಲ್ಲಿ ದೇಶದ ಅಗ್ರಮಾನ್ಯ ಡೆಕಾತ್ಲನ್ ಪಟುವಾಗಿ ಮನ್ನಣೆ ಪಡೆದರು. ಡೆಕಾತ್ಲನ್ ಸ್ಪರ್ಧೆಯೆಂದರೆ ಎರಡು ದಿನಗಳಲ್ಲಿ ನಿಗದಿತ ಹತ್ತು ವಿಭಿನ್ನ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಉನ್ನತ ಸಾಧನೆಗಳನ್ನು ದಾಖಲಿಸಿ ಅತ್ಯಧಿಕ ಪಾಯಿಂಟುಗಳನ್ನು

ಗಳಿಸುವ ಸ್ಪರ್ಧೆ. ಇದರಲ್ಲಿ ಯಶಸ್ಸು ಪಡೆಯಲು ದೈಹಿಕ ಬಲ, ಸ್ಟೆಮಿನಾ ಹಾಗೂ ಎಲ್ಲಾ ಕ್ರೀಡೆಗಳಲ್ಲಿ ಪರಿಣತಿ ಅವಶ್ಯಕವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಸಾಧಿಸಬೇಕೆಂಬ ಛಲ ಮತ್ತು ಸಕಾರಾತ್ಮಕ ಮನೋಭಾವ ಇರಬೇಕಾಗುತ್ತದೆ. ಗೆಲುವಿನಿಂದ ಹಿಗ್ಗದೆ, ಸೋಲಿನಿಂದ ಕುಗ್ಗದೆ–ಶಾಂತ ಮನಸ್ಥಿತಿಯಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸುವುದು ಅವಶ್ಯಕವಾಗುತ್ತದೆ. ಇವೆಲ್ಲಾ ಅವಶ್ಯಕ ಗುಣಗಳನ್ನು ಬೆಳೆಸಿಕೊಂಡು ಅರ್ಪಣಾಭಾವದಿಂದ ತನ್ನ ಕ್ರೀಡಾ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಬಂದ ಬಾಬು ಶೆಟ್ಟಿಯವರು ರಾಷ್ಟ್ರೀಯ ಚಾಂಪಿಯನ್ ಆಗಲು ಹೆಚ್ಚು ಹೊತ್ತು ಬೇಕಾಗಲಿಲ್ಲ. ನಾಲ್ಕು ಬಾರಿ ಲಾಂಗ್ ಜಂಪಿನಲ್ಲಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿದರಲ್ಲದೆ, 110 ಮೀಟರ್ ಹರ್ಡಲ್ಸ್ ಓಟದಲ್ಲಿ ಕೂಡಾ ಮೂರು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿ ಮೂಡಿ ಬಂದರು. ಆದರೆ ಅವರು ಹೆಚ್ಚಿನ ಯಶಸ್ಸನ್ನು ಪಡೆದುದು ಡೆಕಾತ್ಲನ್ ಸ್ಪರ್ಧೆಯಲ್ಲಿ. 1985ರಲ್ಲಿ ಮೊದಲ ಬಾರಿಗೆ ಅವರು ಡೆಕಾತ್ಲನ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ಚಾಂಪಿಯನ್ ಪಟ್ಟ ಗಳಿಸಿದರು. ಈ ಸ್ಪರ್ಧೆಯಲ್ಲಿ ಅವರು ಹತ್ತು ಬಾರಿ ದೇಶದ ಅಗ್ರಮಾನ್ಯ ಕ್ರೀಡಾಪಟುವಾಗಿ ಸ್ಥಾನ ಪಡೆದಿದ್ದರು.

1985ರಲ್ಲಿ ನಡೆದ ಸೌತ್ ಈಸ್ಟ್ ಏಷಿಯನ್ ಫೆಡರೇಶನ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲು ಆಯ್ಕೆಯಾದ ಬಾಬು ಶೆಟ್ಟಿ ಆ ಸ್ಪರ್ಧೆಯಲ್ಲಿ ಸ್ವರ್ಣಪದಕ ಗೆದ್ದುಕೊಂಡರಲ್ಲದೆ ನಂತರ 1987ರಲ್ಲಿ 1989ರಲ್ಲಿ ಮತ್ತು 1991ರಲ್ಲಿ ಕೂಡ ಈ ಪ್ರಶಸ್ತಿಯನ್ನು ಉಳಿಸಿಕೊಂಡರು. 1989ರಲ್ಲಿ ಡಿಲ್ಲಿಯಲ್ಲಿ ನಡೆದ ಏಷಿಯನ್ ಟ್ರ್ಯಾಕ್ ಏಂಡ್ ಫೀಲ್ಡ್ ಸ್ಪರ್ಧೆಯಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ ಅವರು, ಡೆಕಾತ್ಲನ್ ಸ್ಪರ್ಧೆಯಲ್ಲಿ 5ನೇ ಸ್ಥಾನ ಪಡೆದರು. 1990ರಲ್ಲಿ ಚೀನಾದ ಬೀಜಿಂಗಿನಲ್ಲಿ ನಡೆದ ಏಷಿಯನ್ ಗೇಮ್ಸ್‌ನಲ್ಲಿ ಭಾಗವಹಿಸಿದ್ದ ಅವರು ಡೆಕಾತ್ಲನ್ ಸ್ಪರ್ಧೆಯಲ್ಲಿ 7ನೇ ಸ್ಥಾನ ಗಳಿಸಿದ್ದರು. ಬಾರ್ಸಿಲೋನ ಒಲಿಂಪಿಕ್ ಗೇಮ್ಸ್ ನಂತರ ನವದೆಹಲಿಯಲ್ಲಿ ನಡೆಸಲಾದ ಮುಕ್ತ ಒಲಿಂಪಿಕ್ ಸ್ಪರ್ಧೆಯಲ್ಲಿ ಅಥ್ಲೆಟಿಕ್ಸ್‌ನಲ್ಲಿ ದಂತಕಥೆಯಾದ ಕಾರ್ಲ್ ಲುವಿಸ್ ಜೊತೆ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಭಾಗವಹಿಸಿದ ಸಂದರ್ಭ ಅವರಿಗೆ ಚಿರಸ್ಮರಣೀಯ. ಈ ಸ್ಪರ್ಧೆಯಲ್ಲಿ ಬಾಬು ಶೆಟ್ಟಿ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗಳಿಸಿದ್ದರು. ಅಂತಾರಾಷ್ಟ್ರೀಯ ಆಹ್ವಾನ ಕ್ರೀಡಾಕೂಟಗಳಲ್ಲಿ 5 ಬಾರಿ ಭಾರತವನ್ನು ಪ್ರತಿನಿಧಿಸಿದ ಶ್ರೇಯಸ್ಸು ಅವರದ್ದಾಗಿದೆ. ಕ್ರೀಡಾ ಸ್ಪರ್ಧೆಗಳಿಂದ ನಿವೃತ್ತಿಯಾದ ನಂತರ ಬೆಂಗಳೂರು ಸ್ಪೋರ್ಟ್ಸ್ ಕ್ಲಬ್ಬಿನ ನಿರ್ದೇಶಕರಾಗಿ ನೇಮಕಗೊಂಡ ಅವರು, ಕರ್ನಾಟಕ ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ಹಾಗೂ ಮುಖ್ಯ ತರಬೇತುದಾರನಾಗಿಯೂ ದುಡಿಯುತ್ತಿದ್ದಾರೆ.

ಅವರ ಕ್ರೀಡಾ ಸಾಧನೆಗಳನ್ನು ಗುರುತಿಸಿ ಬಂದ ಪ್ರಶಸ್ತಿಗಳು ಹತ್ತು ಹಲವಾರು. ರಾಜ್ಯ ಮಟ್ಟದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಏಕಲವ್ಯ ಪ್ರಶಸ್ತಿ, ದಸರಾ ಪ್ರಶಸ್ತಿ, ತುಳುವಶ್ರೀ ಪ್ರಶಸ್ತಿ ಅವುಗಳಲ್ಲಿ ಸೇರಿವೆ. ಇತ್ತೀಚೆಗೆ ಜಲಾಂಜಾರಿನ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ನಡೆದ ಹಿರಿಯ ಕ್ರೀಡಾಪಟು, ಸಾಹಿತಿ ಬಿ. ಸಚ್ಚಿದಾನಂದ ಹೆಗ್ಡೆಯವರ 80ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಕ್ರೀಡಾ–ಪಟುವೊಬ್ಬನ ಏಳುಬೀಳುಗಳ ಕಥೆಯನ್ನು ಬಿಂಬಿಸುವ ಕಾದಂಬರಿ "ತ್ರಿವಿಕ್ರಮನ ಮೂರನೇ ಹೆಜ್ಜೆ"ಯನ್ನು ಬಿಡುಗಡೆಗೊಳಿಸಿದ ಸಂದರ್ಭದಲ್ಲಿ ಬಾಬು ಶೆಟ್ಟಿಯವರನ್ನು ಸನ್ಮಾನಿಸಲಾಯಿತು. ಮಾಜಿ ಲಯನ್ಸ್ ಗವರ್ನರ್ ಶ್ರೀ ಶ್ರೀಧರ ಶೇಣವ ಮತ್ತು ಮಾಜಿ ಲಯನ್ಸ್ ಅಧ್ಯಕ್ಷ ಡಾ. ಭಾಸ್ಕರ ಶೆಟ್ಟಿ ಸನ್ಮಾನ ಕಾರ್ಯಕ್ರಮ ನೆರವೇರಿಸಿಕೊಟ್ಟರು.

**– ಬಿ. ಸಚ್ಚಿದಾನಂದ ಹೆಗ್ಡೆ, ಉಡುಪಿ**

# BUNTS' SANGHA R.N.S. VIDYANIKETAN - II

Yalachaguppe, Tavarekere, Bangalore - 562130

ಬಂಟರ ಸಂಘ ಬೆಂಗಳೂರು
BUNTS' SANGHA BANGALORE



*"Learning is Empowerment to Ignite a Brighter Future"*

**Admissions open for**
**Montessori / LKG / UKG / Std I to IV CBSE**
**Academic year 2021-2022**

**FACILITIES**

❖ Well furnished smart classrooms
❖ Shaping the minds of tiny tots and setting new standards
❖ Qualified, dedicated and inspiring faculty
❖ Audio visual and activity based method of teaching
❖ Competitions are conducted through various clubs to inculcate a "Seeking Spirit" in children
❖ CCTV camera surveillance 24/7
❖ Voluminous Library
❖ Spacious Auditorium
❖ Play ground
❖ Amphitheatre
❖ Affordable fees







Bunts' Sangha RNS Vidyaniketan II, Yalachaguppe, Tavarekere, Bangalore - 562130
Website: www.bsrnsv.com | Contact: 080 - 2339 8922 / 2339 3610 / 97392 17337 / 76194 01540
Email: info@bsrnsv.com

# BUNTS' SANGHA R.N.S. COMPOSITE PU COLLEGE - II

Yalachaguppe, Tavarekere, Bangalore - 562130

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## Admissions open for - I PUC - Academic year 2021-2022

### Distinctive features

- Well furnished smart classrooms
- Qualified, dedicated and inspiring faculty
- CCTV camera surveillance 24/7
- Voluminous Library
- Well equipped Lab
- Spacious Auditorium
- Play ground
- Amphitheatre
- Affordable fees
- Hostels facilities available for Boys & Girls

### Our strengths

- State Ranks in both Science & Commerce each year.
- 100% results in 2019-20.
- State level winner in Netball for 2 years.
- National level winner in Chess, Athletics, Taekwondo.





"Education is not the learning of facts, but the training of the mind to think." - *Albert Einstein*

**2016-17**



**Shrinidhi**
595 - 99.16% - State
1st Rank - II PU
Commerce



**Sumukh Bhoopalam**
589 - 98.16% - State
5th Rank - II PU
Science

**2017-18**



**Chanchal. A**
579 - 96.50%
II PU - Commerce



**Hrishikesh. E**
584 - 97.33% - State
9th Rank - II PU
Science



**Sudarshan. R**
584 - 97.33% - State
9th Rank - II PU
Science

**2018-19**



**C.Y. Chandana**
589 - 98.16% - State
6th Topper
Science



**Meghana. C**
591 - 98.50% - State
6th Topper
Commerce

**2019-20**



**Meghana. R**
587 - 97.83% - State
11th Rank - II PU
Commerce



**Varun Urs. M. S**
583 - 97.17% - State
14th Rank - II PU
Science

### Courses Offered:

**PUC - SCIENCE:**
- **P C M B** : (Physics, Chemistry, Mathematics, Biology)
- **P C M Cs.** : (Physics, Chemistry, Mathematics, Computer Science)
- **P C M E** : (Physics, Chemistry, Mathematics, Electronics)

**PUC - COMMERCE:**
- **E B A Cs:** (Economics, Business Studies, Accountancy, Computer Science)
- **E B A S** : (Economics, Business Studies, Accountancy, Statistics)

**A Charitable Institution with over 29 years in the field of education at Vijayanagar is venturing into a new, spacious state-of-the-art campus @ Yalachaguppe.**

Bunts' Sangha RNS Vidyaniketan II, Yalachaguppe, Tavarekere, Bangalore - 562130
Website: www.bsrnsv.com | Contact: 080 - 2339 8922 / 2339 3610 / 97392 17337 / 76194 01540
Email: info@bsrnsv.com

ಬಂಟರ ಸಂಘ ಬೆಂಗಳೂರು

# ಸಮಾಜ ಸೇವಾ ಸಮಿತಿ ಮತ್ತು ಸೇವಾದಳ

## 'ಸಹಾಯ ಹಸ್ತ' ಯೋಜನೆ

ನಮ್ಮ ಸಂಘದ ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ಸಮಿತಿಯ ವತಿಯಿಂದ ಸಹಾಯಹಸ್ತ ಯೋಜನೆಯಡಿಯಲ್ಲಿ ಆರ್ಥಿಕ ಸಹಕಾರದ ಅಗತ್ಯವಿರುವ ಸಮುದಾಯ ಬಾಂಧವರ ಮಕ್ಕಳ ಶಿಕ್ಷಣಕ್ಕೆ ನೆರವಾಗಲು ಶಾಲಾ ನೋಟ್ ಪುಸ್ತಕ, ಕಲಿಕಾ ಸಾಮಾಗ್ರಿ ಹಾಗೂ ಶಾಲಾ ಬ್ಯಾಗ್ ವಿತರಿಸಲು ತೀರ್ಮಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ನಿಯಮ/ ಮಾನದಂಡಗಳು**

- ಬೆಂಗಳೂರಿನಲ್ಲಿ ತಮ್ಮ ಕುಟುಂಬದೊಂದಿಗೆ ವಾಸವಿದ್ದು, ಬೆಂಗಳೂರಿನ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ (ಸಂಘದ ಸದಸ್ಯರು ಹಾಗೂ ಸದಸ್ಯೇತರರು) ಅರ್ಜಿ ಸಲ್ಲಿಸಬಹುದಾಗಿದೆ.
- ಬೆಂಗಳೂರಿನ ವಿಳಾಸ ದೃಡೀಕರಣಪತ್ರ ಕಡ್ಡಾಯ.
- 10ನೇ ತರಗತಿ/ ಪಿಯುಸಿವರೆಗೆ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಈ ಯೋಜನೆಗೆ ಅರ್ಹರು.
- ಆಯ್ಕೆಯಾದ ವಿದ್ಯಾರ್ಥಿಗಳಿಗೆ ಒಟ್ಟು ವಾರ್ಷಿಕವಾಗಿ ಅಗತ್ಯವಿರುವ ಶೈಕ್ಷಣಿಕ ನೋಟ್ ಪುಸ್ತಕ ಮತ್ತು ಬ್ಯಾಗ್ ವಿತರಿಸಲಾಗುವುದು.
- ನಿಮಗೆ ಆರ್ಥಿಕ ಅನಾನೂಕೂಲತೆಗಳು ಇದ್ದರೆ ಮಾತ್ರ ಈ ಯೋಜನೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ.
- **ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು**
  - ಶುಲ್ಕ ಪಾವತಿಸಿದ ರಸೀದಿಯ ಮೂಲ ಪ್ರತಿ
  - ವಿದ್ಯಾರ್ಥಿ ಹಾಗೂ ತಂದೆ/ತಾಯಿ/ ಪೋಷಕರ ವಿಳಾಸ ಧೃಢೀಕರಣದ ಪ್ರತಿ (ಆಧಾರ್‌ಕಾರ್ಡ್, ವೋಟರ್‌ಐಡಿ, ಬ್ಯಾಂಕ್ ಪಾಸ್ ಪುಸ್ತಕ ಇತ್ಯಾದಿ)
  - ಬೆಂಗಳೂರು ಬಂಟರ ಸಂಘದ ಸದಸ್ಯತ್ವದ ಗುರುತಿನ ಚೀಟಿಯ ಪ್ರತಿ (ಸದಸ್ಯರಾಗಿದ್ದಲ್ಲಿ)
  - ಕಳೆದ ಶೈಕ್ಷಣಿಕ ಸಾಲಿನ ಅಂಕಪಟ್ಟಿಯ ಧೃಢೀಕೃತ ಪ್ರತಿ
  - ರೇಷನ್‌ಕಾರ್ಡ್ ಪ್ರತಿ

ಅಗತ್ಯವಿರುವ ಸಮುದಾಯ ಬಾಂಧವರು ಈ ಸೌಲಭ್ಯ ಪಡೆಯಲಿಚ್ಚಿಸಿದಲ್ಲಿ ಸೂಕ್ತ ದಾಖಲೆಗಳೊಂದಿಗೆ ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಸಂಘದ ಕಛೇರಿಗೆ ದಿನಾಂಕ 15.05.2021 ರ ಒಳಗಾಗಿ ಸಲ್ಲಿಸತಕ್ಕದ್ದು.

**ಸೂಚನೆ: ಹೆಚ್ಚಿನ ವಿವರಗಳಿಗೆ ಸಂಘದ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.**

**ದೂರವಾಣಿ: 9845025921, 080–23399635/ 23399636/23399323**

ಇಮೈಲ್: info@buntsanghablr.com

Website: www.buntsanghablr.com

# BUNTS' SANGHA BANGALORE

No.324, Chord Road, Vijayanagar, Bangalore – 560 040
Tel: 080-23399323/ 23399635/ 23399636

Parent/Guardian Applicant

## Social Service Committee & Sevadal
## ಸಮಜ ಸೇವಾ ಸಮಿತಿ ಮತ್ತು ಸೇವಾದಳ

**Application for availing Note book, Stationery& School Bag under 'Sahaya Hastha' Scheme**
